ಅಚಲ

ತಿಂಗಳ ಪತ್ರಿಕೆ

ಸೆಪ್ಟೆಂಬರ್ 2002

☼ ಆತಂಕದ ನೆರಳಿನಲ್ಲಿ ಕಾಶ್ಮೀರಿ ಮಹಿಳೆಯರು

- ಕಲ್ಪನಾ ಶರ್ಮ

☼ ನೆನಪಿನಲ್ಲಿ ನಿಲುವಂತಹವರು (ಪುಸ್ತಕ ಪರಿಚಯ)

- ಆಶಾ

☼ ಹೆಣ್ಣಿನ ಪಾಲಿಗೆ ಜಗತ್ತೇ ಭೀಕರ

- ಶಾಂತಾ ನಾಗರಾಜ್

☼ ಸರಳುಗಳೊಳಗಿನ ಸೃಷ್ಟಿ (ನಾಟಕ ವಿಮರ್ಶೆ)

- ಶತಭಿಷ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 17 ಸಂಚಿಕೆ : 9

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 17 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)

ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಸ್ವತಂತ್ರ ಭಾರತದಲ್ಲಿ ಮಹಿಳಾ ಸ್ವಾತಂತ್ರ್ಯ

ಭಾರತ ಸ್ವತಂತ್ರವಾಗಿ ಐವತ್ತೈದು ವರ್ಷಗಳು ಸಂದಿವೆ. ಇಷ್ಟು ವರ್ಷಗಳಾದರೂ ಸ್ವತಂತ್ರ ಭಾರತದಲ್ಲಿ ಮಹಿಳೆ ಎಷ್ಟರ ಮಟ್ಟಿಗೆ ಸ್ವತಂತ್ರವಾಗಿದ್ದಾಳೆಂದರೆ ಸಾರ್ವಜನಿಕ ಸ್ಥಳದಲ್ಲಿ ಬಹಿರಂಗವಾಗಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರ ನಡೆಯುತ್ತಿದ್ದರೆ ಯಾರೂ ರಕ್ಷಣೆ ನೀಡಲಾರದಂತಹ ಸ್ಥಿತಿಯಿದೆ. ಮನೆಯೊಳಗಿರುವ ಹೆಣ್ಣನ್ನು ಈಚೆಗೆ ಎಳೆತಂದು ಅವಳ ಮೇಲೆ ಅತ್ಯಾಚಾರ ಮಾಡಬಲ್ಲದಂತಹ ಸ್ಥಿತಿ ನಮ್ಮ ಮುಂದೆ ಜೀವಂತವಾಗಿ ಇರುವಾಗ ದೇಶ ದೊರಕಿಸಿಕೊಂಡ ಸ್ವಾತಂತ್ರ್ಯ ಯಾರಿಗೆ ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಈ ಘಟನೆಗಳು ದೇಶದ ಯಾವುದೋ ಮೂಲೆಯ ಕುಗ್ರಾಮದಲ್ಲಿ ನಡೆದ ಸಂಗತಿಗಳಲ್ಲ, ದೇಶದ ಹೃದಯಭಾಗವಾದ, ಅತಿ ಹೆಚ್ಚು ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಪಡೆದವರಾದ ಮುಂಬೈ ಶಹರದಲ್ಲಿ ಇಂತಹ ಕೃತ್ಯಗಳು ರಾಜಾರೋಷವಾಗಿ ನಡೆದಿರುವುದು ಇಡೀ ಮಹಿಳಾ ಸಮುದಾಯಕ್ಕೆ ದಿಗ್ಭ್ರಮೆ ಹುಟ್ಟಿಸಿದೆ.

ಇದೇ ವರ್ಷ, ಆಗಸ್ಟ್ 14ರ ರಾತ್ರಿ ದೇಶ ಸ್ವಾತಂತ್ರ್ಯಗಳಿಸಿದ ಸಂಭ್ರಮವನ್ನು ನೆನೆಪಿಸುವ ಕ್ಷಣಗಳಲ್ಲಿ ಮುಂಬಯಿಯ ಬಾಲಕಿಯೊಬ್ಬಳ ಬದುಕಿನಲ್ಲಿ ಆಘಾತಕಾರಿ ಘಟನೆ ನಡೆಯಿತು. ಇದು ದೇಶದ ಒಟ್ಟು ಮಹಿಳೆಯರ ಅತಂತ್ರ ಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಮುಂಬೈಯ ಲೋಕಲ್ ಟ್ರೈನ್‌ನಲ್ಲಿ ಸಂಚರಿಸುತ್ತಿದ್ದ ಹನ್ನೆರಡು ವರ್ಷ ವಯಸ್ಸಿನ ಬಾಲಕಿಯೊಬ್ಬಳ ಮೇಲೆ ಕುಡುಕನೊಬ್ಬ ಬಂದು ಎರಗಿದ. ಬಲವಂತದಿಂದ ಅತ್ಯಾಚಾರ ಮಾಡಿದ. ಈ ಘಟನೆಗೆ ಐವರು ವಯಸ್ಕ ಪುರುಷರು ಸಾಕ್ಷಿಯಾಗಿದ್ದಾರೆ. ಯಾರೊಬ್ಬರೂ ಆ ಸಣಕಲು ಕಡ್ಡಿ ಕುಡುಕನಿಂದ ಆ ಬಾಲಕಿಯನ್ನು ತಡೆಯಲಿಲ್ಲ. ಇದೇಕೆ ಹೀಗೆ? ಅವರಾರಿಗೂ ತಮ್ಮ ಮನೆಯ ಹೆಂಗಸರಾಗಲೀ, ಹೆಣ್ಣು ಮಕ್ಕಳಾಗಲೀ ಆಗ ನೆನಪು ಬರಲಿಲ್ಲವೇ? ಇದೇ ಜಾಗದಲ್ಲಿ ಐವರು ಪುರುಷರ ಬದಲು ಮಹಿಳೆಯರಿದ್ದರೆ ಪರಿಸ್ಥಿತಿ ಬೇರೆಯಿತ್ತೇನೋ ಎಂದೆನಿಸುತ್ತದೆ. ಈ ಸಾರ್ವಜನಿಕ ನಿರ್ಲಕ್ಷ್ಯಕ್ಕೆ ಕಾರಣವಾದರೂ ಏನು? ಆ ಐವರು ಪುರುಷರಲ್ಲಿ ಒಬ್ಬನು ಪತ್ರಿಕೆಯೊಂದರ ವರದಿಗಾರ ಕೂಡ. ಅವನಿಗೆ ಕುಡುಕನ ವರ್ತನೆ ನೋಡಿ ಹೆದರಿಕೆಯಾಯಿತೆಂದು ಹೇಳಿದನೆಂದು ತಿಳಿಸಲಾಗಿದೆ. ಅಂದರೆ ಯಾಂತ್ರೀಕೃತ ಮುಂಬೈ ಶಹರದ ಬದುಕಿನಲ್ಲಿ ಮನುಷ್ಯನ ಭಾವನೆ, ವಿವೇಕವೆಲ್ಲ ಕರಗಿ ಹೋಗಿದೆಯೇ?

ದೇಶದ ಬೇರೆಲ್ಲಾ ನಗರಗಳಿಗೆ ಹೋಲಿಸಿದರೆ ಮುಂಬೈ ಅತ್ಯಂತ ಸುರಕ್ಷಿತ ನಗರವೆಂದೇ ಹೇಳಬೇಕು. ಸಾರ್ವಜನಿಕವಾಗಿ ಹೆಚ್ಚು ಕ್ರಿಯಾಶೀಲವಾಗಿರುವ, ಹೆಚ್ಚು ದುಡಿಯುವ ಮಹಿಳೆಯರಿರುವ ನಗರವಿದು. ಈ ಅತ್ಯಾಚಾರದ ಘಟನೆಯ ನಂತರ ಇಲ್ಲಿನ ದಿಟ್ಟ ಮಹಿಳೆಯರೂ ಕೂಡ ಆಘಾತಗೊಂಡಿದ್ದಾರೆ. ಈ ಆಘಾತಕ್ಕೆ ಮತ್ತೊಂದು ಆಘಾತ ಸೇರುವಂತೆ ಸ್ವಾಂತ್ರ್ಯೋತ್ಸವದ ದಿನ, ಆಗಸ್ಟ್ 15ರಂದು ಮತ್ತೂ ಭಯಂಕರವಾದ ಘಟನೆ ಮುಂಬೈ ಶಹರದಲ್ಲಿ ನಡೆದಿದೆ. ಸ್ವಾತಂತ್ರ್ಯೋತ್ಸವದ ಭರ್ಜರಿ ಆಚರಣೆ ನಡೆಸಿದ ಪಾನೋನ್ಮತ್ತರಾದ ಸುಮಾರು ಹತ್ತು ಮಂದಿ ಪುರುಷರು ಹೆಂಡದೊಂದಿಗೆ ಹೆಣ್ಣು ಇದ್ದರೆ ಸೊಗಸಾಗಿರುತ್ತದೆಯೆಂದು ಭಾವಿಸಿ ಉತ್ತರ ಮುಂಬೈನ ಹೊರವಲಯದಲ್ಲಿದ್ದ ಬಡವರ ಮನೆಯೊಂದಕ್ಕೆ ನುಗ್ಗಿ ಮನೆಯಾತನನ್ನು ಹೊರಗೆಳೆದರು. ನಂತರ ಅವನ ಎಳೆವಯಸ್ಸಿನ ಹೆಂಡತಿಯ ಮೇಲೆ ಸರದಿಯಂತೆ ಬಿದ್ದು ಅತ್ಯಾಚಾರವೆಸಗಿದರು.

ಈ ಎರಡೂ ಘಟನೆಗಳು ಭಾರತೀಈಯ ಹೆಣ್ಣಿನ ಸ್ಥಿತಿಯ ಭಾಷ್ಯದಂತಿದೆ. ದುಶ್ಶಾಸನ, ಕೀಚಕರ ಪರಂಪರೆಯ ಈ ನಾಡಿನಲ್ಲಿ ಪಾಂಡವರೂ ಇರುವರಲ್ಲವೇ? ತುಂಬಿದ ಸಭೆಯಲ್ಲಿ ಐವರು ಗಂಡಂದಿರ ಸಮ್ಮುಖದಲ್ಲಿ ಪಾಂಚಾಲಿಯ ಮಾನಭಂಗವಾಗಲಿಲ್ಲವೇ? ಮದುವೆಯಾದ ಗಂಡಂದಿರೇ ಅವಳ ರಕ್ಷಣೆಗೆ ಒದಗಿ ಬರಲಿಲ್ಲವೆಂದ ಮೇಲೆ ಹೊರಗಿನವರನ್ನು ದೂಷಿಸಿಯೇನು ಪ್ರಯೋಜನ? ನಾಲ್ಕು ಗೋಡೆಯೊಳಗೂ ಹೆಣ್ಣಿಗೆ ಭದ್ರತೆಯಿಲ್ಲ ಮತ್ತು ಸಾರ್ವಜನಿಕ ಸ್ಥಳದಲ್ಲೂ ಅವಳಿಗೆ ರಕ್ಷಣೆಯಿಲ್ಲವೆಂದ ಮೇಲೆ ಭಾರತೀಯ ಹೆಣ್ಣಿನ ಅಸಹಾಯಕ, ಅಭದ್ರ ಸ್ಥಿತಿ ಗಾಭರಿ ಹುಟ್ಟಿಸುತ್ತದೆ.

ಈ ಎರಡೂ ಘಟನೆಗಳು ಮುಂಬೈ ಶಹರದ ಬಗ್ಗೆ ಅಲ್ಲಿನ ಹೆಣ್ಣಿನ ಸ್ಥಿತಿಯ ಬಗ್ಗೆ, ಒಟ್ಟಾರೆ ಆ ವಿಷಯಕ್ಕೆ ಸಂಬಂಧಿಸಿದ ಹಲವಾರು ಸಂಗತಿಗಳ ಬಗ್ಗೆ ಬೆಳಕು ಬೀರುತ್ತದೆ. ಭಾರತೀಯ 'ಭವ್ಯ ಸಂಸ್ಕೃತಿ' - ಈ ನಗರದಲ್ಲಿ ಬಡವರಾಗಿರುವುದು ಮತ್ತು ಹೆಣ್ಣಾಗಿರುವುದು ಅತ್ಯಂತ ಆತಂಕದ ಸಂಗತಿ. ಬಡವರ ಮನೆಗಳಿಗೆ ನುಗ್ಗಿ ಅವರಿಗೆ ಸಂಬಂಧಿಸಿದ್ದನ್ನು ಲೂಟಿ ಮಾಡಬಹುದೆಂದುಕೊಳ್ಳುವ ಮನೋಭಾವ ಯಾವ ವ್ಯಕ್ತಿತ್ವಕ್ಕೆ ಘನತೆಯನ್ನು ತಂದೀತು! ಹಾಗೆಯೇ ತನ್ನ ಕಾಮತೃಷೆಗೆ ಯಾವ ಹೆಣ್ಣಾದರೇನು, ಎಲ್ಲಾರೂ ಒಂದೇ ಎಂದುಕೊಳ್ಳುವ ವಿಕೃತ ಮನೋಭಾವ ಭಾರತೀಯ ಸಂಸ್ಕೃತಿಗೆ ಮರ್ಯಾದೆಯನ್ನು ತಂದೀತೆ? ಪರರ ಹೆಂಗಸರ ಬಗ್ಗೆ ಪುರುಷ ತಾಳುವ ಈ ದಿವ್ಯ ನಿರ್ಲಕ್ಷ್ಯದ ಅತಿರೇಕ ಎಷ್ಟೆಂಬುದನ್ನು ಇತ್ತೀಚಿನ ಗುಜರಾತ್ ಹತ್ಯಾಕಾಂಡದಲ್ಲಿ ಕಂಡಿದ್ದೇವೆ. ಜಾತಿದ್ವೇಷ. ಧರ್ಮದ್ವೇಷದ ಕಲಹಗಳಲ್ಲೆಲ್ಲಾ ಮೊದಲು ಗುರಿಯಾಗುವುದು ಹೆಣ್ಣಿನ ಮಾನ ಮತ್ತು ದೇಹ. ತಮ್ಮ ದೇಹ ಮತ್ತು ಮಾನವನ್ನು ರಕ್ಷಿಸಿಕೊಳ್ಳಲಾಗದಷ್ಟು ಅತಂತ್ರರಾಗಿರುವ ಭಾರತೀಯ ಹೆಣ್ಣಿಗೆ ಭಾರತದ ಸ್ವಾತಂತ್ರ್ಯ ಎಷ್ಟರಮಟ್ಟಿಗೆ ಅರ್ಥಪೂರ್ಣ?

ಈ ಎರಡೂ ಘಟನೆಗಳು ಹೆಂಡ ಮತ್ತು ಕಾಮಕ್ಕಿರುವ ಸಂಬಂಧ. ಇಂದು ಮಾಧ್ಯಮಗಲ್ಲಿ ಬಿತ್ತರವಾಗುವ ಜಾಹೀರಾತುಗಳಲ್ಲಿ ಹೆಣ್ಣು ಮತ್ತು ಮದ್ಯ ಅಗತ್ಯವಾಗಿ ಕಾಣಿಸಿಕೊಳ್ಳಲಿರುವ ಜೋಡಿ ವಸ್ತುಗಳು, ಅತ್ಯಂತ ಕಡಿಮೆ ವಸ್ತ್ರಧರಿಸಿದ ಹೆಂಗಸರೊಂದಿಗೆ ಮದ್ಯದ ವಿವಿಧ ಬ್ರಾಂಡುಗಳ ಜಾಹಿರಾತು ಕಂಗೊಳಿಸುತ್ತವೆ. ಸರ್ಕಾರವೂ ಕೂಡ ಮದ್ಯದ ನೀತಿಯನ್ನು ಪ್ರಚಾರಮಾಡುತ್ತಾ ರಾಜ್ಯದ ಬೊಕ್ಕಸ ತುಂಬಿಕೊಳ್ಳುತ್ತಿದೆ.

ಕರ್ನಾಟಕದಲ್ಲಿ ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಾಗ ಇಡೀ ಮಹಿಳಾ ಸಮುದಾಯ ಅದನ್ನು ಪ್ರತಿಭಟಿಸಿತು. ಈಗ ಮತ್ತೊಮ್ಮೆ ಅಂತ ಆಘಾತ ಒದಗಿ ಬಂದಿದೆ. ಸ್ನಾಕ್ ಬಾರ್‌ಗಳಲ್ಲಿ ಮದ್ಯ ಮಾರಾಟ ಮಾಡಲು ಹೊರಟಿರುವ ಸರ್ಕಾರ ಮಹಿಳೆಯರ ಪಾಲಿಗೆ ಶತ್ರುವಾಗಿದೆ. ಈ ಶತ್ರುವಿನ ವಿರುದ್ಧದ ಹೋರಾಟ ಮಹಿಳೆಯರ ಒಟ್ಟು ಸಂಘಟಿತ ಶಕ್ತಿಯಿಂದ ಸಾಧ್ಯ. ಈಗಾಗಲೇ ಸಾಕ್ಷರತಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಹಿಳೆಯರು ಇಂತಹ ಪ್ರತಿಭಟನೆಯ ಹಾದಿ ಹಿಡಿದಿದ್ದಾರೆ. ಉಳಿದ ಎಚ್ಚೆತ್ತ ಮಹಿಳೆಯರು ಇವರೊಂದಿಗೆ ಹೆಜ್ಜೆ ಹಾಕಬೇಕಾಗಿದೆ.

ಮದ್ಯಪಾನದ ವಿರುದ್ಧ ಮಹಿಳೆಯರ ಪ್ರತಿಭಟನೆ ಒಂದು ಸಣ್ಣ ಹೋರಾಟವಷ್ಟೇ. ಪಾನೋನ್ಮತ್ತ ಪುರುಷರು ಯಾವ ಅತಿರೇಕದ ಹಂತದವರೆಗೂ ಹೋಗಬಲ್ಲರು ಎನ್ನುವುದಕ್ಕೆ ಮುಂಬೈಯ ಘಟನೆಗಳು ಒಂದು ನಿದರ್ಶನವಷ್ಟೇ. ನಮ್ಮ ಸಂದರ್ಭದಲ್ಲಿ ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿದ್ದು ಇದರ ಜೊತೆಗೆ ಇನ್ನು ಹಲವಾರು ವ್ಯಸನಗಳ ಸಂಗಾತಿಗಳಾದ ಪುರುಷವರ್ಗ ಹೆಣ್ಣಿನ ಬದುಕನ್ನು ಘೋರವಾಗಿಸಿವೆ. ಹೆಣ್ಣಿನ ಸಶಕ್ತೀಕರಣದ ಪ್ರಕ್ರಿಯೆಯ ಜೊತೆ ಜೊತೆಯಲ್ಲಿ ಸ್ವಾತಂತ್ರ್ಯ, ಸುಭದ್ರತೆಯ ಜಗತ್ತೂ ಅವಳದಾಗಬೇಕಾಗಿದೆ.

- ಎನ್. ಗಾಯತ್ರಿ

ಆತಂಕದ ನೆರಳಿನಲ್ಲಿ ಕಾಶ್ಮೀರಿ ಮಹಿಳೆಯರು

- ಕಲ್ಪನಾ ಶರ್ಮ

''ನಿಮಗೆ ನಮ್ಮ ನೋವು ಏನಾದರೂ ಅರ್ಥವಾಗುವುದೇ ಇಲ್ಲ'' ಎಳೆಯ ವಯಸ್ಸಿನ ಮಹಿಳೆಯೊಬ್ಬಳು ನಮ್ಮತ್ತ ಅರಚಿದಳು. ತಲೆಗೆ ಕಪ್ಪು ಸ್ಕಾರ್ಫ್ ಸುತ್ತಿದ್ದ ಯುವತಿಯೊಂದಿಗೆ ಅಂತಹುದೇ ಭಾವನೆಗಳ ಮಹಾಪೂರ ನಮ್ಮತ್ತ ಧಾವಿಸಿತು. ಇದು ನಡೆದದ್ದು ಶ್ರೀನಗರದ ಎಸ್.ಎಸ್.ಎಮ್. ಎಂಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಮುದಾಯವನ್ನು ಮಾತನಾಡಿಸಿದಾಗ. ನಮ್ಮೊಡನೆ ನಡೆದ ಚರ್ಚೆಯಲ್ಲಿ ಯುವಕರು ಪ್ರಮುಖ ಪಾತ್ರ ವಹಿಸಿದರು. ಮುಂದಿನ ಸಾಲಿನಲ್ಲಿ ಮಹಿಳೆಯರು ಮೌನವಾಗಿ ಕುಳಿತಿದ್ದರು. ಆದರೆ ಕೊನೆಯ ಸಾಲಿನ ಯುವತಿ ಮಾತ್ರ ಇಡೀ ವಾತಾವರಣವನ್ನೇ ಕಲಕುವಂತೆ ನಮ್ಮತ್ತ ಗುಡುಗಿದಳು.

ಅವಳು ಹೇಳಿದ ಮಾತಿನಲ್ಲಿ ಸತ್ಯವಿತ್ತು. ನಾವು ಕಾಶ್ಮೀರದ ಬಗ್ಗೆ ಎಷ್ಟೇ ಮಾಹಿತಿ ಓದಲಿ, ಅಲ್ಲಿನ ಯಾರನ್ನೇ ಮಾತನಾಡಿಸಲೀ ನಮಗೆ ಅವರ ಸಂಪೂರ್ಣ ನೋವು ಅರ್ಥವಾಗುವುದು ಸಾಧ್ಯವೇ ಇಲ್ಲ. ಅವರ ನೋವು, ಆತಂಕ, ಒತ್ತಡಗಳು ಮತ್ತು ಶಾಂತಿಗಾಗಿ ತಹತಹಿಸುವ ಅವರ ಬಯಕೆ - ಇವುಗಳ ಸಂಪೂರ್ಣ ಚಿತ್ರ ನಮಗೆ ಮೂಡುವುದು ಸಾಧ್ಯವಿಲ್ಲವೇನೋ ಎಂದೆನಿಸುತ್ತದೆ. ನಾವು ಅಲ್ಲಿದ್ದಾಗ ಅವರೊಡನೆ ನಡೆಸುವ ಪ್ರತಿಮಾತು, ಸಂಭಾಷಣೆಗಳಲ್ಲಿ ನಾವು ಭೇಟಿ ಮಾಡುವ ಜನಗಳು ಮನೆಯಲ್ಲಿರಲಿ, ಮಾರುಕಟ್ಟೆಯ ಸ್ಥಳದಲ್ಲಿರಲಿ, ಅಥವಾ ತೊಂದರೆಯಿಲ್ಲದ ಜಾಗದಲ್ಲಿರಲಿ ಅವರಿಗೆ ಕಷ್ಟ ಮತ್ತು ನೋವು ಯಾವಾಗ ಬರುತ್ತದೆಂದು ಊಹಿಸಲಾಗುವುದಿಲ್ಲ.

ಶ್ರೀನಗರದ ಮೊಗಲ್ ಕೋಟೆಯ ಕೆಳಭಾಗದಲ್ಲಿರುವ ಜಿಯಾರತ್ ಮುಖದೂಮ್ ಸಾಹಿಬ್ ಗುಡಿಗೆ ಸೋಮವಾರ ಮತ್ತು ಗುರುವಾರದಲ್ಲಿ ಬೆಳಗಿನ ವೇಳೆಯಲ್ಲಿ ಸಾವಿರಾರು ಮಹಿಳೆಯರು ಬರುತ್ತಾರೆ. ಅಲ್ಲಿ ಪ್ರಾರ್ಥನೆ, ಧ್ಯಾನ ಮಾಡುತ್ತಾ ಕುಳಿತ ಮಹಿಳೆಯರ ಬೃಹತ್ ಸಮೂಹವನ್ನೇ ಕಾಣಬಹುದು. ಅಲ್ಲಿ ಯಾರನ್ನೂ ಮಾತನಾಡಿಸಬೇಕಿಲ್ಲ. ಆದರೆ ಪ್ರತಿಯೊಂದು ಮುಖವೂ ನೂರಾರೂ ನೋವಿನ ಕತೆಗಳನ್ನು ಹೇಳುತ್ತಿರುತ್ತವೆ. ಆ ಕಥೆಗಳ ಸುರುಳಿ ಬಿಚ್ಚಿದಾಗ...

ದೂರದ ಕುಪ್‌ವಾರಾದ ಬಳಿ ಕುನ್ನನ್ ಒಂದು ಹಳ್ಳಿ. ಒಂದು ಪರ್ವತ ಶ್ರೇಣಿಯಿಂದಾಗಿ ಪಾಕಿಸ್ಥಾನದಿಂದ ಬೇರ್ಪಟ್ಟಿದೆ. ಸುಮಾರು ಮುನ್ನೂರು ಕುಟುಂಬಗಳು ವಾಸಿಸುವ ಈ ಹಳ್ಳಿ ಒಂದು ರೀತಿಯಲ್ಲಿ ಶಾಂತ, ಸಮೃದ್ಧ ಹಾಗೂ ಪ್ರಕೃತಿಯ ಯಾವ ಲಾಸ್ಯಕ್ಕೂ ಭಂಗಬಾರದ ಮಾದರಿ ಹಳ್ಳಿಯೆನ್ನಬಹುದು. ಹಳ್ಳಿಯಲ್ಲಿ ಜನರು ಬಡವರಿದ್ದರೂ ತಲೆ ಮೇಲೊಂದು ಸೂರು, ಹೊಟ್ಟೆಗೆ ಊಟ ಖಾತ್ರಿಯಾಗಿತ್ತು. ಅಸ್ಪೃಶ್ಯತೆಯ ಆಚರಣೆಯಿಲ್ಲ. ಆದರೆ ಅಂತಹ ಹಳ್ಳಿಯು ಇಂದು ದುಃಖದ ಸೆರಗು ಹೊದ್ದು ಗಾಢ ನೋವಿನ ಕೂಪವಾಗಿದೆ.

ಇಲ್ಲಿನ ಮಹಿಳೆಯರ ಕಣ್ಣಲ್ಲಿ ಕಾಣುವ ಗಾಢವಾದ ನೋವು ಅವರ ಕುಟುಂಬದ ಕಷ್ಟಗಳಿಂದ, ದಿನನಿತ್ಯದ ಕೆಲಸದ ಹೊರೆಯಿಂದ ಉಂಟಾದ್ದಲ್ಲ. ಆ ಕಣ್ಣುಗಳು ಬೇರೆಯದೇ ಕತೆಯನ್ನು ಹೇಳುತ್ತವೆ. 1991ರಲ್ಲಿ ನಡೆದ ಘಟನೆಯೊಂದರ ಅವಮಾನ ಮತ್ತು ಅಸಹಾಯಕತೆಯ ನೋವಿನ ಕತೆಯನ್ನು ಈ ಕತೆಗಳು ಹೇಳುತ್ತವೆ. ಈ ಹಳ್ಳಿಯ ಸುಮಾರು ಮೂವತ್ತು ಮಹಿಳೆಯರನ್ನು ಭಾರತದ ಸೈನಿಕರು ಅತ್ಯಾಚಾರ ಮಾಡಿದಾಗ ಈ ಹೆಂಗಸರ ನೋವಿನ ಕತೆಯ ಅಧ್ಯಾಯ ಆರಂಭವಾಯಿತು. ಹನ್ನೊಂದು ವರ್ಷಗಳ ನಂತರ ಈಗ ಆ ಕ್ರೌರ್ಯಕ್ಕೊಳಗಾದ ಹೆಂಗಸರಲ್ಲಿ ಕೆಲವರು ಅವಿವಾಹಿತರಾಗಿಯೇ ಉಳಿದಿದ್ದಾರೆ. ಇನ್ನು ಕೆಲವು ವಿವಾಹಿತ ಮಹಿಳೆಯರು ತಮ್ಮ ಹುಟ್ಟಿದ ಮನೆಗೆ ಹಿಂತಿರುಗಿ ಬಂದಿದ್ದಾರೆ. ಆದರೆ ಎಲ್ಲರೂ ಬದುಕಿನ ಬಗ್ಗೆ ಭಯ, ಆತಂಕಗಳನ್ನು ಕಟ್ಟಿಕೊಂಡೇ ಬಾಳುತ್ತಿದ್ದಾರೆ.

ಆ ಘಟನೆ ನಡೆದಾಗ ಎಳೆಯ ಪೋಷಾಗೆ ವಯಸ್ಸು ಕೇವಲ ಐದು ವರ್ಷ. ಇಂದು ಅವಳು ಅಂಗನವಾಡಿ ಕಾರ್ಯಕರ್ತೆಯಾಗಿ ತಿಂಗಳಿಗೆ 800 ರೂಪಾಯಿಗಳನ್ನು ಸಂಪಾದಿಸುತ್ತಿದ್ದಾಳೆ. ಅವಳ ಮನಸ್ಸಿನಾಳದಲ್ಲಿ 1991ರ ಘಟನೆ ಅತ್ಯಂತ ಕ್ರೂರವಾದ ನೋವಿನ ಗೆರೆಯನ್ನು ಗೀಚಿದೆ. ಅವಳು ಮತ್ತು ಅವಳಂತಹ ಹಲವಾರು ಮಕ್ಕಳ ಮನಸ್ಸಿನಲ್ಲಿ ತಾಯಂದಿರ ಮೇಲೆ ನಡೆದ ಅತ್ಯಾಚಾರವನ್ನು ಪ್ರತ್ಯಕ್ಷವಾಗಿ ಕಂಡ ನೋವಿನ ಬುತ್ತಿಯಿದೆ. ''ಈ ಹಳ್ಳಿಯ ಹುಡುಗಿಯರಿಗೆ ಸಮಸ್ಯೆಗಳು ಹಲವಾರು. ಪಕ್ಕದ ಹಳ್ಳಿಯ ಜನರು ನಮ್ಮನ್ನು ಭೇಟಿಯಾದಾಗ ಹಿಂದಿನ ಅವಮಾನದ ನೋಟವನ್ನೇ ಅವರಿಂದ ಎದುರಿಸಬೇಕಾಗುತ್ತದೆ'' ಎನ್ನುವ ಪೋಷಾ ಇಡೀ ಹಳ್ಳಿಯ ಮಹಿಳಾ ಸಮುದಾಯವೇ ಆ ಕಳಂಕವನ್ನು ಎದುರಿಸಬೇಕಾಗಿದೆ, ಎಂದು ಭಾವಿಸುತ್ತಾಳೆ. ಈ ಹಳ್ಳಿಗೆ ಸೈನ್ಯದ ಜನರೇನಾದರೂ ಬಂದರೆ ಎಲ್ಲ ಎಳೆ ವಯಸ್ಸಿನ ಹೆಣ್ಣು ಮಕ್ಕಳೂ ಬಚ್ಚಿಟ್ಟು ಕೊಳ್ಳುತ್ತಾರೆ. ವರ್ಷವಿಡೀ ಹಳ್ಳಿಯಲ್ಲಿ ಪುರುಷರ ಸಂಖ್ಯೆ ತುಂಬಾ ಕಡಿಮೆ. ಪಂಜಾಬ್ ಮತ್ತು ಕಲ್ಕತ್ತಾಗಳಿಗೆ ಉಣ್ಣೆ ಶಾಲು ಮತ್ತು ಬಟ್ಟೆಗಳನ್ನು ಮಾರಲು ತೆರಳುವ ಗಂಡಸರು ಮಾರ್ಚ್ ವೇಳೆಗೆ ಹಿಂತಿರುಗಿ ಬರುತ್ತಾರೆ.

ಇಷ್ಟೆಲ್ಲ ಭಯ, ಆತಂಕಗಳ ನಡುವೆಯೂ ಇಲ್ಲಿನ

ಪುಟ 7ಕ್ಕೆ ....

ನೆನಪಿನಲ್ಲಿ ನಿಲ್ಲುವಂತಹವರು

ನೆನಪು ಗರಿ ಬಿಚ್ಚಿದಾಗ
ಲೇಖಕಿ : ಎಲ್. ವಿ. ಶಾಂತಕುಮಾರಿ
ಪ್ರಕಾಶಕರು : ಅನಿಕೇತನ ಪ್ರಕಾಶನ, ತುಮಕೂರು, 2002
ಬೆಲೆ ರೂ. 100 ಪುಟಗಳು 164

ಸಾಹಿತ್ಯದ ಅಧ್ಯಾಪಕರು, ಸಾಹಿತ್ಯಾಸಕ್ತರೂ ಆದ ಶ್ರೀಮತಿ ಶಾಂತಕುಮಾರಿಯವರು ತಮ್ಮ ನಿವೃತ್ತ ಜೀವನದಲ್ಲಿ ರಚಿಸಿದ ಮೊದಲ ಕೃತಿಯಿದು. ತಮ್ಮ ದೀರ್ಘ ಬದುಕಿನ ನೆನಪಿನ ಗರಿ ಬಿಚ್ಚಿ ಹಲವಾರು ವ್ಯಕ್ತಿಚಿತ್ರಗಳನ್ನು ಇಲ್ಲಿ ಬಿಡಿಸಿದ್ದಾರೆ. ಇಲ್ಲಿ ಚಿತ್ರಣಗೊಂಡಿರುವ ಸುಮಾರು ಇಪ್ಪತ್ತೆರಡು ವ್ಯಕ್ತಿ ಚಿತ್ರಗಳಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರ ಚಿತ್ರಗಳಾಗಿವೆ. ಒಟ್ಟಾರೆಯಾಗಿ ಅವರ ಬದುಕಿನಲ್ಲಿ ಹಾಸುಹೊಕ್ಕ ಹಲವಾರು ವ್ಯಕ್ತಿಗಳು, ಅವರ ಸಂವೇದನೆಯ ಸೂಕ್ಷ್ಮಮತಿಗೆ ಗೋಚರಿಸಿದ ವ್ಯಕ್ತಿಗಳು ಮತ್ತು ಸಂಗತಿಗಳು ಸರಳ ಪ್ರಬಂಧಗಳಾಗಿ ಇಲ್ಲಿ ಮೈದಾಳಿವೆ.

ಈ ಕೃತಿಯು ಮುಖ್ಯವಾಗಿ ಎರಡು ರೀತಿಯ ಅನುಭವವನ್ನು ಕಟ್ಟಿಕೊಡುತ್ತದೆ. ಬದುಕಿನ ಸಂಕಷ್ಟಗಳಲ್ಲಿ ಪರಿಪಕ್ವವಾದ ಜೀವಗಳ ಇಲ್ಲಿನ ವ್ಯಕ್ತಿ ಚಿತ್ರಗಳು ಜೀವನದ ಹಲವಾರು ಪ್ರಶ್ನೆಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆಯೆನ್ನುವುದು ಒಂದು ಅಂಶ. ಮತ್ತೊಂದು, ನನಗೆ ಅತ್ಯಂತ ಮುಖ್ಯವಾದದ್ದೆಂದೆನಿಸಿದರೆ ಐವತ್ತು, ಅರವತ್ತರ ದಶಕದ ಒಂದು ಜೀವನ ವಿಧಾನದ ವಿವರಗಳು ಇಲ್ಲಿ ದೊರೆಯುತ್ತದೆ. ಅದರಿಂದಾಗಿ ಸೂಕ್ಷ್ಮ ಸಂವೇದಿಯಾದ ಲೇಖಕಿಯೊಬ್ಬಳು ಕಂಡರಿಸಿದ ಸಾಂಸ್ಕೃತಿಕ ಲೋಕದ ಅನಾವರಣವನ್ನು ಈ ಹೊತ್ತಿಗೆಯಲ್ಲಿ ಕಾಣಬಹುದಾಗಿದೆ.

ಯಾವುದೇ ಲಾಯರ್ ಆಫೀಸು ಹಲವಾರು ಸಮಸ್ಯೆಗಳ ಚಾವಡಿಯಾಗಿರುತ್ತದೆ. ಆದರೆ ಈ ಸಮಸ್ಯೆಗಳ ರಾಡಿಯಲ್ಲಿ ಸಿಕ್ಕಿ ಒದ್ದಾಡುವವರಿಗೆ ಕಾನೂನಿನ ಪರಿಹಾರ ದೊರಕಿಸಿಕೊಡುವುದಷ್ಟೇ ಅಲ್ಲದೇ, ಅದಕ್ಕೂ ಹೆಚ್ಚಿನ ಮಾನವೀಯತೆ, ಅತಿಥಿ ಸತ್ಕಾರ ತೋರುವುದು ಬಹುಷಃ ನಮ್ಮ ದೇಶಕ್ಕೇ ವಿಶಿಷ್ಟವಾದ ಸಾಮಾಜಿಕ ಪದ್ಧತಿಯಿರಬಹುದು. ಇತ್ತೀಚಿನ ದಿನಗಳಲ್ಲಿ ಇಂತಹ ಆಪ್ತ ಸ್ವರೂಪ ಕರಗಿ ಹೋಗುತ್ತಿರಬಹುದು. ಆದರೆ ಕಳೆದ ನಲವತ್ತು, ಐವತ್ತು ವರ್ಷಗಳ ಹಿಂದೆ ಲಾಯರ್ ವೃತ್ತಿಗೆ ಇದ್ದ ವಿಶಿಷ್ಟತೆ ಇದು. ಹೀಗಾಗಿ ಲಾಯರ್ ವೆಂಕಟರಾಮಯ್ಯನವರ ಬಳಿ ಬರುತ್ತಿದ್ದ ಮಹಿಳೆಯರ ಪ್ರತಿನಿಧಿಗಳಾಗಿ ಗೌರಮ್ಮ, ಪಾರ್ವತಿ, ಪುರದಮ್ಮ, ಕಲ್ಲೂರ ಅಜ್ಜಿ, ಸೊಪ್ಪಿನ ಸಾಕಮ್ಮ, ಸುಬ್ಬಲಕ್ಷ್ಮಿ - ಮುಂತಾದವರು ಬದುಕಿನ ವಿವಿಧ ಸಂಕಷ್ಟಗಳಲ್ಲಿ ಅರಳಿ ನಿಂತವರು. ತಮ್ಮ ಬದುಕಿನ ಕ್ರಮಕ್ಕೂ ಭಿನ್ನ ಸ್ತರದಲ್ಲಿ ಬದುಕಿದವರ ಜೀವನದ ಎಳೆಗಳನ್ನು ನಯವಾಗಿ ಜೋಡಿಸಿಟ್ಟಿದ್ದಾರೆ, ಇಲ್ಲಿ ಲೇಖಕಿ. ಇದಲ್ಲದೆ ಅವರ ಬದುಕಿನಲ್ಲಿ ಅತ್ಯಂತ ಪ್ರಭಾವ ಬೀರಿದ ಅಜ್ಜಿಯರು, ಗೆಳತಿಯರು ಮತ್ತು ಶಿಕ್ಷಕಿಯರನ್ನೂ ಇಲ್ಲಿ ನೆನಪಿನ ಚಿತ್ರಗಳಲ್ಲಿ ಸೆರೆ ಹಿಡಿದಿದ್ದಾರೆ.

ಮತ್ತೊಂದು ಗುಂಪಿನ ವ್ಯಕ್ತಿ ಚಿತ್ರಗಳು ರದ್ದಿ ರಂಗಪ್ಪ, ಗಂಗರಾಜ ಮೇಷ್ಟ್ರು, ಹೊಸಪೇಟೆಯ ಒಡಕಪ್ಪ, ಕಿಟ್ಟಣ್ಣಯ್ಯ ತಾತ, ಹೋಟೆಲ್ ಶಂಕರಪ್ಪ, ಗುಮಾಸ್ತರು ಮತ್ತು ತುಮಕೂರಿನ ಕುದುರೆಗಾಡಿ ಕರೀಂ - ಮುಂತಾದ ಲೇಖನಗಳು ನಮ್ಮನ್ನು ಅರ್ಧ ಶತಮಾನಕ್ಕೂ ಹಿಂದಿನ ಜನ ಜೀವನವನ್ನು, ಸಾಮಾಜಿಕ ಚರಿತ್ರೆಯ ತುಣುಕೊಂದನ್ನು ಪರಿಚಯಿಸುತ್ತದೆ. ಆ ಬಾಲ್ಯದ ಎಳವೆಯ ನೆನಪುಗಳಲ್ಲಿ ತನ್ಮಯರಾಗಿ, ಭಾವಾವೇಶಕ್ಕೊಳಗಾಗಿ ವಿಚಾರದ ಅಂಶಗಳಿಂದ ದೂರವಾಗುವ ಅಂಶವನ್ನು ಕೆಲವೊಂದು ಸಂದರ್ಭದಲ್ಲಿ ಕಾಣಬಹುದಾದರೂ ಈ ಕೃತಿಯಲ್ಲಿ ಪ್ರತಿಬಿಂಬಿತವಾಗಿರುವ ಶಾಂತಕುಮಾರಿಯವರ ನೆನಪಿನ ಗಣಿ ವೈವಿಧ್ಯಮಯವಾಗಿದೆ. ಅಕ್ಷರದ ಜ್ಞಾನವಿಲ್ಲದಿದ್ದರೂ ಅನುಭವದ ಮೂಟೆ ಹೊತ್ತ ಪುರದಮ್ಮ, ಕಲ್ಲೂರ ಅಜ್ಜಿ, ಅಗಸರ ಪಾರ್ವತಿ, ಪ್ರಮೀಳಾಬಾಯಿ - ಮುಂತಾದ ಮಹಿಳಾ ಚಿತ್ರಗಳು ನಮ್ಮ ಸಂಸ್ಕೃತಿಯ ದಿಟ್ಟ ಪ್ರತೀಕಗಳಾಗಿವೆ. ಈ ಸಂದರ್ಭದಲ್ಲಿ ಮುನ್ನುಡಿಯಲ್ಲಿ ಪ್ರೊ. ಜಿ. ಎಸ್. ಶಿವರುದ್ರಪ್ಪನವರು ಹೇಳಿರುವಂತೆ, ''ಹರಟೆ, ಲಲಿತ ಪ್ರಬಂಧ ಮತ್ತು ಸಣ್ಣಕತೆ - ಈ ಮೂರರ ಲಕ್ಷಣಗಳನ್ನೂ ಮೇಳೈಸಿಕೊಂಡಂತಿರುವ ಇಲ್ಲಿನ ಇಪ್ಪತ್ತು ನೆನಪುಗಳ ಚಿತ್ರಣವನ್ನು ಶಾಂತಕುಮಾರಿಯವರು, ಇವುಗಳ ಕಲಾತ್ಮಕತೆಯ ಕಟ್ಟೋಣದ ಕಡೆಗೆ ಯಾವ ಪ್ರತ್ಯೇಕ ಗಮನವನ್ನೂ ಕೊಡದೆ, ನೆನಪುಗಳು ಹೇಗೆ ಅವರ ಮನಸ್ಸಿನೊಳಗಿಂದ ನಿರರ್ಗಳವಾಗಿ ಹರಿದು ಬಂದವೋ ಹಾಗೇ ಇಲ್ಲಿ ಹಿಡಿಸಿದ್ದಾರೆ,' ಎಂಬಮಾತುಗಳು ಈ ಕೃತಿಯ ಸ್ವರೂಪದ ಬಗ್ಗೆಗಿನ ಸ್ಪಷ್ಟ ವ್ಯಾಖ್ಯಾನವಾಗಿದೆ.



ಸಂಸ್ಕೃತಿಯ ಕಪ್ಪು ಚುಕ್ಕೆ

ಬೆಂಗಳೂರು ವಿಶ್ವಭೂಪಟದಲ್ಲಿ ರಾರಾಜಿಸುತ್ತಿರುವ ಒಂದು ಬೆಳ್ಳಿ ಚುಕ್ಕೆ. ಇತ್ತೀಚಿನ ದಿನಗಳಲ್ಲಂತೂ ಸಿಲಿಕಾನ್ ಕಣಿವೆಯಾಗಿ ಜಗತ್ತಿನ ಹಲವಾರು ಭಾಗಗಳಿಗೆ ಮೇಧಾವಿಗಳನ್ನು ಹಂಚಿ, ವೈಜ್ಞಾನಿಕವಾಗಿ ದಾಪುಗಾಲಿಡುತ್ತಿರುವ ನಗರ. ಇಂತಹ ಅತ್ಯಂತ ಸುಶಿಕ್ಷಿತ, ನಾಗರೀಕ ಪಟ್ಟಣದಲ್ಲಿಯೂ ಹೆಣ್ಣು ಮಕ್ಕಳಿಗೆ ಮನೆಯಿಂದ ಹೊರಗೆ ಕಾಲಿಡಲು ರಕ್ಷಣೆ ಇಲ್ಲ ಎಂದರೆ ಆಶ್ಚರ್ಯ ಪಡುತ್ತೀರಾ? ತನ್ನ ವಿವಾಹದ ಆಯ್ಕೆಯಲ್ಲೇ ಸವಾಲೆಸೆದ ಅಕ್ಕ ಮಹಾದೇವಿಯ ಈ ಕನ್ನಡನಾಡಿನಲ್ಲಿ ಇಪ್ಪತ್ತೊಂದನೆಯ ಶತಮಾನದಲ್ಲಿ ತಾನು ಇಚ್ಛಿಸದವನ ಆಸೆಗೆ ಬಲಿಯಾಗಬೇಕಾದ ಹೆಣ್ಣು ಮಕ್ಕಳ ದುರಂತಕತೆಗಳು ಎಷ್ಟೋ ಇವೆ. ಅಂತಹವುಗಳಲ್ಲಿ ಇತ್ತೀಚಿನ ಶ್ರುತಿಯ ಘೋರ ಕತೆ ನಮ್ಮ ಸಂಸ್ಕೃತಿಯ ಕಪ್ಪು ಚುಕ್ಕೆ.

ಬೆಂಗಳೂರಿನ ಜಯನಗರದಲ್ಲಿರುವ ದರ್ಜಿಯಾಗಿ ಕೆಲಸ ಮಾಡುತ್ತಿರುವ ಎಚ್.ಎಸ್. ಸತ್ಯನಾರಾಯಣ್‌ರವರ ಇಬ್ಬರು ಮಕ್ಕಳಲ್ಲಿ ಶ್ರುತಿ ಹಿರಿಯ ಮಗಳು. ಎಸ್.ಎಸ್.ಎಲ್.ಸಿ.ಯಲ್ಲಿ ಫೇಲ್ ಆದದ್ದಕ್ಕೆ ಬೇಸರಗೊಂಡ ಶ್ರುತಿ ಒಂದು ವರ್ಷ ಹಾಳು ಮಾಡುವುದೇಕೆಂದು ಕಂಪ್ಯೂಟರ್ ಕೋರ್ಸ್ ಸೇರಿಕೊಂಡಳು. ತರಗತಿಗೆ ಹೋಗಿ ಬರುತ್ತಿದ್ದ ಶ್ರುತಿಯ ಬೆನ್ನಿಗೆ ಅದೇ ಬಡಾವಣೆಯ ರಾಜೇಶ್ ವಕ್ಕರಿಸಿದ. ನೋಡಲು ಅತ್ಯಂತ ರೂಪಸಿಯಾಗಿರುವ ಶ್ರುತಿಗೆ ಅವಳ ರೂಪವೇ ಶತ್ರುವಾಯಿತೇನೋ! ''ನಿನ್ನನ್ನು ಪ್ರೀತಿಸ್ತಿದೀನಿ, ನೀನು ಪ್ರೀತಿಸ್ಲೇಬೇಕು'' ಎಂದ ರಾಜೇಶನ ಮಾತಿಗೆ ಶ್ರುತಿ ಬೆಚ್ಚಿದಳು. ಮನೆಗೆ ಬಂದು ತಾಯಿಯ ಮುಂದೆ ಬಿಕ್ಕಿ ಬಿಕ್ಕಿ ಅತ್ತಳು. ಸಮಾಧಾನಪಡಿಸಿದ ತಾಯಿ ರಾಜೇಶನಿಗೆ ಬುದ್ಧಿ ಮಾತು ಹೇಳಿದರು. ವಿಕೃತ ಮನಸ್ಸಿಗೆ ಅದು ಪಥ್ಯವಾಯಿತೇ? ಅವನು ತನ್ನ ಚೇಷ್ಟೆ ಬಿಡಲಿಲ್ಲ. ಗಾಬರಿಗೊಂಡ ಶ್ರುತಿಯಿಂದ ತಂದೆಗೂ ವಿಷಯ ತಿಳಿದು ಅವರು ಮನೆಯನ್ನೇ ಬದಲಾಯಿಸಿದರು. ಪ್ರೀತಿಯ ಭೂತ ಅಲ್ಲಿಗೇ ಬಿಡಲಿಲ್ಲ.

ಕಳೆದ ಆಗಸ್ಟ್ ಹನ್ನೆರಡರಂದು ಬಸ್‌ಸ್ಟಾಪಿನಲ್ಲಿ ಬಸ್ಸಿಗೆ ಕಾಯುತ್ತಾ ನಿಂತಿದ್ದ ಶ್ರುತಿಗೆ ಆಘಾತ ಕಾದಿತ್ತು. ಅಲ್ಲಿಗೆ ಧಾವಿಸಿದ ರಾಜೇಶ್ ಮತ್ತೆ ಶ್ರುತಿಯೊಡನೆ ಪ್ರೇಮಕ್ಕಾಗಿ ಕಾಡಿದ. ತಿರಸ್ಕರಿಸಿದ ಅವಳಿಗೆ, ಆ್ಯಸಿಡ್ ತೆಗೆದು ಮಿಂಚಿನ ವೇಗದಲ್ಲಿ ಮೈಮೇಲೆ ಸುರಿದೇ ಬಿಟ್ಟ. ವಿಕೃತ ಕಾಮಿಯ ಕರಾಳ ಕೃತ್ಯಕ್ಕೆ ಬಲಿಯಾದ ಶ್ರುತಿ ಈಗ ನಗರದ ಖಾಸಗಿ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾಳೆ. ಆ ನೋವಿನ ನಡುವೆಯೂ ಅವಳಿಗೆ ತನ್ನ ತಂದೆ ತಾಯಿಗಳಿಗೆ ತನ್ನಿಂದ ತೊಂದರೆಯಾಗುತ್ತಿದೆಯೆಂಬ ಅಳುಕು.

ಮುದ್ದು ಮುದ್ದಾದ ರೂಪವಂತೆ ಶ್ರುತಿ ಆ್ಯಸಿಡ್ ದೇಹದ ಬಲಭಾಗಕ್ಕೆ ಬಿದ್ದ ಪರಿಣಾಮದಿಂದಾಗಿ ಬಲಗಣ್ಣಿನ ದೃಷ್ಟಿ ಕಳೆದುಕೊಂಡಿದ್ದಾಳೆ. ಬಲಕೆನ್ನೆ, ಕತ್ತು, ಎದೆಯ ಬಲಭಾಗ ಹಾಗೂ ಬೆನ್ನಿನ ಅರ್ಧಭಾಗ ಸಂಪೂರ್ಣ ಸುಟ್ಟು ಹೋಗಿದೆ. ಆ್ಯಸಿಡ್‌ನ್ನು ಮೇಲ್ಭಾಗದಿಂದ ಎರಚಿದ್ದರ ಪರಿಣಾಮವಾಗಿ ತಲೆಗೂದಲು ಸಂಪೂರ್ಣ ಸುಟ್ಟು ಹೋಗಿದೆ. ಈ ಕರಾಳ ರೂಪದಲ್ಲಿ ಅವಳನ್ನು ಯಾರೂ ಗುರ್ತಿಸಲು ಸಾಧ್ಯವೇ ಇಲ್ಲ. ಬಡ ಮಧ್ಯಮವರ್ಗದ ಇವಳ ಕುಟುಂಬಕ್ಕೆ ಆಸ್ಪತ್ರೆಯ ಖರ್ಚು ಭರಿಸುವುದು ಊಹಿಸಲಾಗದ ಹೊರೆ. ಅವಳ ಒಟ್ಟು ಚಿಕಿತ್ಸೆಗೆ ಸುಮಾರು ಏಳು ಲಕ್ಷ ಖರ್ಚಾಗಬಹುದೆಂದು ಅಂದಾಜು ಮಾಡಿರುವ ಜಯನಗರದ ರಾಜಶೇಖರ ನರ್ಸಿಂಗ್ ಹೋಂನವರು ಸಾರ್ವಜನಿಕರ ಸಹಾಯಕ್ಕಾಗಿ ವಿನಂತಿಸಿದ್ದಾರೆ.

ವಿಕೃತ ಕಾಮಿ ರಾಜೇಶ್‌ನೇನೋ ಇಂದು ಸರಳುಗಳ ಹಿಂದಿದ್ದಾನೆ. ಅವನಿಗೇನು ಶಿಕ್ಷೆ ಕಾದಿದೆಯೋ ಗೊತ್ತಿಲ್ಲ. ಆದರೆ ಬದುಕಿನಲ್ಲಿ ಏನು ತಪ್ಪು ಮಾಡದ ಶ್ರುತಿ ಆಜೀವ ಶಿಕ್ಷೆಯನ್ನು ಅನುಭವಿಸುವಂತಾಗಿದೆ. ಇದಕ್ಕೆ ಯಾರು ಕಾರಣ? ಸಮಾಜವೇ ಉತ್ತರ ಹೇಳಬೇಕು. ಸಂಸ್ಕೃತಿ, ಸಂಸ್ಕಾರ - ಎಂದೆಲ್ಲ ಬೊಬ್ಬೆಯಿಡುವ ನಾವು ನಮ್ಮಲ್ಲಿಯೇ ಆತ್ಮಶೋಧನೆ ಮಾಡಿಕೊಳ್ಳಬೇಕು. ''ಯತ್ರ ನಾರ್ಯಾಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ'' ಈ ಆ್ಯಸಿಡ್ ಪೂಜೆಯಿಂದ ಯಾವ ದೇವರು ರಮಿಸುತ್ತಾರೆ?

ಶ್ರುತಿಗೆ ನೆರವಾಗಬೇಕೆನ್ನುವವರು

'ರಾಜಶೇಖರ ಪ್ರಸೂತಿ ಕೇಂದ್ರ,'
ನಂ. 21, 9ನೇ ಅಡ್ಡರಸ್ತೆ, ಜೆ.ಪಿ.ನಗರ 1ನೇ ಹಂತ,
ಸಾರಕ್ಕಿ ಲೇ ಔಟ್, ಬೆಂಗಳೂರು - 560 078.
ದೂರವಾಣಿ : 6642164 / 6648901

ಅಥವಾ

ಎಚ್.ಎಸ್. ಸತ್ಯನಾರಾಯಣ, ಎಸ್.ಬಿ. ಖಾತೆ
ನಂ. 9666/9, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು,
ಜಯನಗರ ಶಾಖೆ, ಬೆಂಗಳೂರು - 1
ಈ ವಿಳಾಸಕ್ಕೆ ಹಣ ಕಳಿಸಬಹುದು.

ಹೆಣ್ಣಿನ ಪಾಲಿಗೆ ಜಗತ್ತೇ ಭೀಕರ!

- ಶಾಂತಾನಾಗರಾಜ್

ಇತ್ತೀಚೆಗೆ ಟಿ.ವಿ. ಚಾನೆಲ್ ಒಂದರಲ್ಲಿ 'ಛುಪೇ ಚಹರೆ' (ಮುಚ್ಚಿದ ಮುಖ) ಎನ್ನುವ ಕಾರ್ಯಕ್ರಮವೊಂದು ಬಿತ್ತರವಾಯಿತು. ಒಬ್ಬ ಮಹಿಳೆ ತನ್ನ ಬಾಲ್ಯದ ಭೀಕರ ಅನುಭವವನ್ನು ಹೇಳಿಕೊಂಡರು. ಆಕೆಗೆ ಆಗ ಏಳೇ ವರ್ಷವಾಗಿತ್ತು. ಗುಂಡಗೆ ಮುದ್ದು ಮುದ್ದಾಗಿದ್ದ ಹಾಲು ಗಲ್ಲದ ಈ ಸುಂದರ ಮಗುವನ್ನು ತಾತನ ಮನೆಗೆ 'ವಿದ್ಯೆ'ಗಾಗಿ ಕಳುಹಿಸಲಾಯಿತು. ಅಲ್ಲಿದ್ದ ದೊಡ್ಡಪ್ಪನ ಮಗ ಸುಮಾರು ಮೂವತ್ತೈದು ವರ್ಷದ ವ್ಯಕ್ತಿ ತನ್ನ ಸ್ವಂತ ಚಿಕ್ಕಪ್ಪನ ಈ ಮುಗ್ಧ ಮಗುವನ್ನು ಲೈಂಗಿಕ ತೃಷೆಗಾಗಿ ಬಳಸಿಕೊಂಡರು. ಒಟ್ಟು ಕುಟುಂಬದ ಹತ್ತಾರು ಮಂದಿ ಇರುವ ಈ ಮನೆಗೆ ಈ ದೊಡ್ಡಣ್ಣನೇ ದುಡಿಯುವ ವ್ಯಕ್ತಿ. ಆತನ ಅಧಿಕಾರಕ್ಕೆ ಎಲ್ಲರೂ ತಲೆಬಾಗುವವರೇ. ಈ ಮುಗ್ಧ ಮಗುವಿಗೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಹೇಳಿಕೊಳ್ಳಲೂ ತೋಚದಂತಹ ಅಸಹಾಯಕಸ್ಥಿತಿ. ಹೀಗೆ ಸತತವಾಗಿ ನಾಲ್ಕು ವರ್ಷ ಈ ಬಾಲೆ ಇಂಥ ಹಿಂಸೆಗೆ ಒಳಗಾಗಬೇಕಾಯಿತು. ಒಮ್ಮೆ ಹೆದರಿ ಹೆದರಿ ಸೋದರತ್ತೆಯೊಬ್ಬಳ ಹತ್ತಿರ ತನ್ನ ಕಷ್ಟ ತೋಡಿಕೊಂಡ ಮಗುವಿಗೆ ಸಿಕ್ಕ ಉತ್ತರ - ''ಏ ಹೀಗೆಲ್ಲಾ ಯಾರ ಹತ್ತಿರವೂ ಹೇಳಬೇಡ. ಅವನು ಮನೆಯ ಯಜಮಾನ. ಇಂಥ ಒಟ್ಟು ಕುಟುಂಬದಲ್ಲಿ ಯಜಮಾನ ಏನು ಮಾಡಿದರೂ ನಾವು ಹೆಂಗಸರು ಸಹಿಸಿಕೊಳ್ಳಬೇಕು. ಪಾಪ! ಅವನಾದರೂ ಏನುಮಾಡುತ್ತಾನೆ ವೇಶ್ಯೆಯರ ಹತ್ತಿರ ಹೋಗಿ ರೋಗಬರಿಸಿ ಕೊಳ್ಳಲು ಸಾಧ್ಯವೇ? ನೀನಿನ್ನೂ ಚಿಕ್ಕ ಹುಡುಗಿ ನಿನಗೇನೂ ಆಗುವುದಿಲ್ಲ. ಸುಮ್ಮನೇ ಎಲ್ಲವನ್ನೂ ಸಹಿಸಿಕೋ''.

ಈ ಮಗು ನಾಲ್ಕೈದು ವರ್ಷ ಈ ಯಾತನೆಯನ್ನು ಅನುಭವಿಸಿತು. ಆಗ ಆ ವ್ಯಕ್ತಿ ಇದ್ದಕ್ಕಿದ್ದಂತೆ ಸತ್ತು ಹೋದ ಆ ಘಟನೆಯನ್ನು ನೆನೆಸಿಕೊಂಡು ಆ ಮಹಿಳೆ ಹೇಳುತ್ತಾರೆ. ''ನನಗೆ ಆತನ ಸಾವು ಒಂದು ರೀತಿಯ ಬಿಡುಗಡೆಯ ಭಾವ ತಂದಿತು. ನಾನಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟೆ. ಆಗ ನನಗೆ ಹನ್ನೆರಡು ವರ್ಷವಾಗಿತ್ತು. ಓದಿನಕಡೆ ಗಮನ ಹರಿಸತೊಡಗಿದೆ. ನನಗೆ ಶಾಲೆಯೆಂದರೆ ಪಂಚಪ್ರಾಣವಾಗಿತ್ತು. ತರಗತಿಯಲ್ಲಿ ಯಾವಾಗಲೂ ಮೊದಲಿಗಳಾಗಿದ್ದೆ''. ಆದರೆ ಈ ಮಗುವಿನ ನೆಮ್ಮದಿ ಹಾಗೇ ಮುಂದುವರೆಯುವುದು ಆಕೆಯ ಪಾಲಿಗೆ ಲಭ್ಯವಿರಲಿಲ್ಲ. ಆ 'ಮನುಷ್ಯನ ಸಾವಿನ ನಂತರ ಆ ಮನೆ ಒಡೆಯಿತು. ಈ ಮಗು ಮತ್ತೆ ತಂದೆ ತಾಯಿಯ ಮನೆಗೆ ವಾಪಸ್ ಬರಬೇಕಾಯಿತು. ಹುಡಗಿಗೆ ಖುಷಿಯಾಯಿತು. ತಾನು ಹುಟ್ಟಿ ಬೆಳೆದ ಮನೆ. ಪುಟ್ಟಬಾಲ್ಯ ಕಳೆದ ಮನೆ. ಅಮ್ಮನ ಬೆಚ್ಚನೆಯ ಪ್ರೀತಿ, ಅಪ್ಪನ ಮಮತೆ, ತಮ್ಮ ತಂಗಿಯರ ಒಡನಾಟ, ಸುಂದರೆ ಕನಸುಗಳನ್ನು ಹೆಣೆಯಿತು ಮನಸ್ಸು. ಆದರೆ ಪರಿಸ್ಥಿ ಬೇರೆಯೇ ಇತ್ತು. ಖಾಯಿಲೆಯಿಂದ ಹಾಸಿಗೆ ಹಿಡಿದ ಅಮ್ಮ ಈ ಹಿರಿಯ ಮಗಳನ್ನು ಸೀದಾ ಅಡುಗೆ ಮನೆಗೇ ಅಟ್ಟಿದಳು. ತಮ್ಮ ತಂಗಿಯರೊಂದಿಗೆ ಆಟವಿರಲಿ, ಬದಲಿಗೆ ಈ ಹಿರಿಯಕ್ಕ ಅವರ ಹೊಟ್ಟೆ ಬಟ್ಟೆಗಳ ಜವಾಬ್ದಾರಿ ಹೊರಬೇಕಾಯಿತು. ಯಾವ ಅಪ್ಪನಿಂದ ಮಮತೆಯ ಮಹಾಪೂರದ ಕನಸು ಕಂಡಿದ್ದಳೋ ಅದೇ ಅಪ್ಪ ವಿಷಕಂಟಕನಾದ. ಆತ ಪಕ್ಕದ ಮನೆಯ ವಿವಾಹಿತ ಹೆಂಗಸಿನ ಜೊತೆ ಸಂಬಂಧವಿರಿಸಿಕೊಂಡಿದ್ದ. ಆ ಹೆಂಗಸಿನ ಮಗ ಈ ಹುಡುಗಿಗಿಂತ ಏಳೆಂಟು ವರ್ಷ ದೊಡ್ಡವನು ಈ ಹುಡುಗಿಯ ಮೇಲೆ ಹದ್ದಿನಂತೆ ಎರಗಿದ. ತನ್ನ ತಾಯಿಯ ಗೆಣೆಕಾರನ ಮೇಲಿದ್ದ ರೋಷವೆಲ್ಲಾ ಅವನ ಮಗಳ ಮೇಲೆ ತೀರಿಸಿದ. ಬಾಲೆಗೆ ಬಾಂಡಲೆಯಿಂದ ಬೆಂಕಿಗೇ ಬಿದ್ದ ಅನುಭವ!

ಈ ಎಲ್ಲ ಹಿಂಸೆಗಳನ್ನು ಮರೆಯಲು ಆಕೆ ಆರಿಸಿಕೊಂಡದ್ದು 'ವಿದ್ಯೆ'ಯನ್ನು ಶಾಲೆಯ ಕಲಿಕೆ ಅವಳ ದುಃಖವನ್ನು ಮರೆಸುತ್ತಿತ್ತು. ಆಕೆ ಶಾರೀರಿಕವಾಗಿ, ಮಾನಸಿಕವಾಗಿ, ಬಲಿಷ್ಠಳಾದಳು ಹದಿನಾರು ವಯಸ್ಸಿನ ಹೊತ್ತಿಗೆ ಈ ದೌರ್ಜನ್ಯ ರೂಡಿಸಿಕೊಳ್ಳುವಷ್ಟು ವಿವೇಕ ಧೈರ್ಯ ಬೆಳೆಯಿತು. ವಿದ್ಯೆ ಆಕೆಗೆ ಮಾನಸಿಕ ತಾಕತ್ತು ಕೊಟ್ಟಿತ್ತು. ಅವಳ ರೂಪಕ್ಕಿಂತ ಹೆಚ್ಚಾದ ಆತ್ಮಬಲ ಮತ್ತು ಬುದ್ಧಿಶಕ್ತಿಗಳನ್ನು ಮೆಚ್ಚಿದ ನವ ತರುಣನೊಬ್ಬ ಮದುವೆಯಾಗಲು ಬಯಸಿದ. ಹುಡುಗಿ ತನ್ನ ನರಕ ಸದೃಶ ಬಾಲ್ಯದ ದುರಂತವನ್ನೆಲ್ಲಾ ಅವನಿಗೆ ಹೇಳಿ ''ಈಗಲೂ ನನ್ನನ್ನು ಮದುವೆಯಾಗುತ್ತೀಯಾ? ನಾನು ಬದುಕಿರುವವರೆಗೆ ನನ್ನ ಬಗ್ಗೆ ಗೌರವದಿಂದಿರಬಲ್ಲೆಯಾ?'' ಎಂದು ಸವಾಲು ಹಾಕಿದಳು. ಆ ತರುಣನಿಗೆ ಇವಳ ಕತೆಕೇಳಿ ಶಾಕ್ ಆಯಿತು. ಆದರೆ ಅವನು ವಿವೇಕವಂತ 'ಇದಕ್ಕೆಲ್ಲಾ ನೀನು ಕಾರಣಳಲ್ಲ ನನ್ನಂತೆ ಪುರುಷರಾಗಿದ್ದವರೇ ಕಾರಣರು. ಅದಕ್ಕೆ ನೀನುಯಾಕೆ ಶಿಕ್ಷೆ ಅನುಭವಿಸಬೇಕು. ಅದನ್ನೆಲ್ಲಾ ಮರೆತು ಬಿಡು ನಾವು ಸುಖಸಂಸಾರ ನಡೆಸೋಣ'' ಎಂದ.

ಆ ಮಹಿಳೆ ಹೇಳುತ್ತಾರೆ ''ನನಗೀಗ ಹತ್ತು ವರ್ಷದ ಮಗಳಿದ್ದಾಳೆ. ಹಗಲೂ ರಾತ್ರಿ ಅವಳ ಕ್ಷೇಮ ಕಾಪಾಡುವುದೇ

ನನ್ನ ಮೊದಲ ಚಿಂತೆಯಾಗಿದೆ. ನಾನು ಅವಳಿಗೆ ಅರ್ಥವಾಗುವಷ್ಟು ನನ್ನ ಕತೆ ಹೇಳಿದ್ದೇನೆ. ಏನೇ ಸಣ್ಣತೊಂದರೆ ಬಂದರೂ ನನ್ನ ಜೊತೆ ಹಂಚಿಕೊಳ್ಳಲು, ನಾಚದಿರಲು ತಿಳಿಸಿದ್ದೇನೆ. ನನಗಂತೂ ಹೀಗೆ 'ಕೇಳುವ' ಕಿವಿಗಳಿರಲಿಲ್ಲ. ನನ್ನ ಮಗಳಿಗೆ ನಾನು ಅವಳಪ್ಪ ಇಬ್ಬರೂ ಸ್ನೇಹಿತರಂತೆ ಆಲಿಸುವ ಕಿವಿಗಳಾಗಿದ್ದೇವೆ.'' ಈಕೆ ತನ್ನ ಮಗಳಿಗಷ್ಟೇ ಅಲ್ಲ ಇಂಥ ನೂರಾರು ಹೆಣ್ಣುಮಕ್ಕಳಿಗೆ 'ಆಲಿಸುವ ಕಿವಿ'ಯಾಗಿದ್ದಾರೆ. ಅಷ್ಟೇ ಅಲ್ಲ ನಿವಾರಿಸುವ ಆಶ್ರಯದಾತೆಯೂ ಆಗಿದ್ದಾರೆ. ಈಕೆ ಹೀಗೆ ಬಾಲ್ಯದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದ ಹೆಣ್ಣು ಮಕ್ಕಳಿಗಾಗಿ 'ಆಪ್ತ ಸಲಹಾಕೇಂದ್ರ' ತೆರೆದಿದ್ದಾರೆ. ಈಕೆ ಕೊಡುವ ಅಂಕಿ ಅಂಶಗಳು ಎಂಥಹವರನ್ನೂ ತಲ್ಲಣಗೊಳಿಸುತ್ತದೆ. ಅವರು ಸಂಗ್ರಹಿಸಿರುವ ಒಂದು ವರದಿಯ ಪ್ರಕಾರ ಭಾರತದಲ್ಲಿ ಹತ್ತರ ಒಳಗಿನ ಹೆಣ್ಣುಮಕ್ಕಳಲ್ಲಿ ಹತ್ತರಲ್ಲಿ ಒಂದು ಮಗು (ಅಂದರೆ ಶೇ 10) ಹೀಗೆ ತನ್ನ ಹತ್ತಿರದವರಿಂದಲೇ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗುತ್ತಿದೆ. ತನ್ನ ಹಿಂಸೆಯನ್ನು ಮಾತುಗಳಲ್ಲಿ ಮೂಡಿಸಲಾಗದ ವಯಸ್ಸಿನಲ್ಲಿ ಹೀಗೆ ತನ್ನ ಆಪ್ತರೇ ಬಳಸಿಕೊಳ್ಳುವುದನ್ನು 'ಕುಟುಂಬ' ಎನ್ನುವ ಸುಭದ್ರ ಸಂಸ್ಥೆಯೇ ತಪ್ಪಿಸಲಾಗದ ದುರಂತ ಸ್ಥಿತಿಯಲ್ಲಿ ಈ ಮಕ್ಕಳಿದ್ದಾರೆ. ಹೆಣ್ಣಿಗೆ ಈಗ ಯಾವ ಪರಿಸ್ಥಿತಿ ಬಂದೊದಗಿದೆಯೆಂದರೆ ತನ್ನ ಮನೆಯ ಹಿರಿಯನೋ, ಪಕ್ಕದ ಮನೆಯ ಅಂಕಲ್ಲೋ, ಪದೇ ಪದೇ ಮನೆಗೆ ಬರುವ ಪುರೋಹಿತನೋ, ತಾಯಿಯ ಅಥವಾ ತಂದೆಯ ಅಣ್ಣ ತಮ್ಮಂದಿರೋ, ಹಿರಿಯಣ್ಣನೋ ಕಡೆಗೆ ಹುಟ್ಟಿಸಿದ ಅಪ್ಪನೇ ಖಳನಾಗಿ ಬಿಡುವ ಸಾಧ್ಯತೆ ಇದೆ. ಆಡುತ್ತಿದ್ದ ಆರುತಿಂಗಳ ಕೂಸೊಂದನ್ನು ತನ್ನ ಮನೆಯಲ್ಲಿ ಆಡಿಸುತ್ತೇನೆ ಎಂದು ಕರೆದುಕೊಂಡು ಹೋದ ಪಕ್ಕದ ಮನೆ ಯುವಕ ಆ ಮಗುವಿನ ಮೇಲೆ ಅತ್ಯಾಚಾರ ಮಾಡಿದ್ದನ್ನು, ಆತನ ಮೇಲೆ ಕೇಸುಹಾಕಿ, ಅವನನ್ನು ಹಿಡಿಸಲು ಪಟ್ಟಪಾಡನ್ನು ಈ ಮಹಿಳೆ ನೆನಪಿಸಿಕೊಳ್ಳುತ್ತಾರೆ.

ಇದು ಇಂದು ಹೆಣ್ಣುಮಕ್ಕಳಿಗಿರುವ ಹೊಲಸು ಪರಿಸರ. ಇದಕ್ಕೆ ಕಾರಣ ಹೆಚ್ಚುತ್ತಿರುವ ಕ್ರೌರ್ಯ ಮತ್ತು ಚಲನಚಿತ್ರ, ಟಿ.ವಿ.ಗಳಲ್ಲಿ ಮುಕ್ತವಾಗಿ ಪ್ರದರ್ಶಿತವಾಗುತ್ತಿರುವ ಕಾಮ, ಗಂಡಸು ಏನು ಮಾಡಿದರೂ ಸರಿ ಎಂಬ ಸಮಾಜದ ಮೌಢ್ಯ ಎಲ್ಲಕ್ಕಿಂತ ಹೆಚ್ಚಾಗಿ ಇಂಥ ಕಾಮಾಂಧರಿಗೆ ಸರಿಯಾದ ಶಿಕ್ಷೆ ಸಿಗದೆ ನುಣಿಚಿಕೊಳ್ಳಲು ಸಾಧ್ಯವಾಗಿರುವಂತಹ ಕಾನೂನು.

★ ★ ★

ಪುಟ 3ರಿಂದ....

ಮಹಿಳೆಯರು ಜ್ಞಾನದ ದಾಹ, ದುಡಿಯುವ ಹುಮ್ಮಸ್ಸು ಎರಡನ್ನೂ ಕಳೆದುಕೊಂಡಿಲ್ಲ. ಚಿಕ್ಕ ಚಿಕ್ಕ ಹುಡುಗಿಯರೂ ಇಲ್ಲಿ ಕಸೂತಿಯನ್ನು ಕಲಿತು ಆ ಕೆಲಸದಲ್ಲಿ ತೊಡಗಿದ್ದಾರೆ. ನಾನು ಭೇಟಿಯಾದ ಮತ್ತೊಂದು ಹುಡುಗಿ ಶಮೀಮಾ, ಹದಿನೈದರ ಪ್ರಾಯದವಳು. ಪುಟ್ಟ ಮಕ್ಕಳಿಗೆ ಓದುವುದು ಮತ್ತು ಬರೆಯುವುದನ್ನು ಕಲಿಸುತ್ತಾಳೆ. ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚು ಕಷ್ಟ ಅನುಭವಿಸಬೇಕಾಗುತ್ತದೆ, ಎನ್ನುವ ಇವಳು ವಿದ್ಯಾಭ್ಯಾಸ ಹೆಣ್ಣು ಮಕ್ಕಳಿಗೆ ಅತ್ಯಂತ ಅಗತ್ಯವಾದ ಅಂಶ ಎಂದು ಒತ್ತಿ ಹೇಳುತ್ತಾಳೆ.

ಪೋಷಾ, ಶಮೀಮ್‌ರಂತಹ ಎಳೆಯ ಹುಡುಗಿಯರ ಸಂಖ್ಯೆ ಈ ಹಳ್ಳಿಯಲ್ಲಿ ಹೇರಳವಾಗಿದೆ. ಹೊಸ ಬದುಕಿನ ನಿರೀಕ್ಷೆಯಲ್ಲಿ ದುಡಿಯುವ ಛಲ ಮತ್ತು ಜ್ಞಾನದ ದಾಹ ಹೊತ್ತ ಈ ಎಳೆಯರು ಭವಿಷ್ಯದ ಆಶಾಕಿರಣವಾಗಿದ್ದಾರೆ. ಶಮೀಮ್, ಪೋಷಾರಂತಹ ಎಳೆಯರನ್ನು ಭೇಟಿಯಾಗಿ ಒಂದು ವಾರ ಕಾಲ ಈ ಕಣಿವೆಯಲ್ಲಿ ಸುತ್ತಾಡಿ ಬಂದ ಮೇಲೆ ಈ ಜನರ ಭವಿಷ್ಯದ ಬಗ್ಗೆ ನನಗೆ ಆಶಾಭಾವನೆಯುಂಟಾಗಿದೆ. ಹಾಗೆಂದ ಮಾತ್ರಕ್ಕೆ ಅವರ ಸಾರ್ವಜನಿಕ ಜೀವನ ಆತಂಕರಹಿತವಾಗಿದೆಯೆಂದು ನಾನು ಹೇಳುತ್ತಿಲ್ಲ. ಈಗಲೂ ಈ ಎಳೆಯ ತಲೆಮಾರಿನವರು 'ಬಂದೂಕಿನ ನಳಿಗೆ'ಯತ್ತ ದೃಷ್ಟಿಯಿಟ್ಟೇ ಬದುಕು ಸಾಗಿಸಬೇಕಾಗಿದೆ. ಒಂದು ಕಡೆಯಿಂದ ಭಾರತೀಯ ಸೈನಿಕರ ನಳಿಗೆಯಾದರೆ ಮತ್ತೊಂದು ಕಡೆ ಉಗ್ರರ ಆಟಾಟೋಪ! ಒಟ್ಟಾರೆ ಪಾಕಿಸ್ಥಾನದ ಅಂಚಿನಲ್ಲಿರುವ ಈ ಹಳ್ಳಿ ಬದುಕಿನ ನೆರಳಲ್ಲಿ ಶಾಂತಿಯರಸಿ ಬಾಳಬೇಕಾದ್ದು ದಿನವೂ ಹುಟ್ಟ ಸತ್ತಂತೆ.

ಇಷ್ಟೆಲ್ಲ ನಿರಾಶಾದಾಯಕ ವಾತಾವರಣದ ನಡುವೆಯೂ ಪೋಷಾ, ಶಮೀಮ್‌ರಂತಹ ಬದುಕ ಪ್ರೀತಿಸುವ ಹುಡುಗಿಯರನ್ನು ನೋಡಿ ಬಂದ ಮೇಲೆ ಶ್ರೀನಗರದಲ್ಲಿ ದಿಲಾಫ್ರೋಜ್‌ಳನ್ನು ಭೇಟಿಯಾದೆ. ಶ್ರೀನಗರದಲ್ಲಿ ಈಕೆ ಆರಾಮಾದ ಜೀವನ ನಡೆಸಬಹುದಿತ್ತು. ಆದರೆ ಉಗ್ರರ ದೌರ್ಜನ್ಯ, ಹಿಂಸೆಯ ಕಾವು ಅನುಭವಿಸಿರುವ ಈಕೆ ಕಣಿವೆಯ ಉಳಿದ ಹೆಂಗಸರಿಗೆ ನೆರವಾಗುವ ಏನಾದರೂ ಕಾರ್ಯ ಮಾಡುವ ಉದ್ದೇಶದಿಂದ ಹಣ ಸಂಗ್ರಹಿಸಿ ಅಲ್ಲಿ ಆರ್ಥಿಕ ಚಟುವಟಿಕೆಯನ್ನು ನಡೆಸಬೇಕೆಂದಿರುವ ಈಕೆ ಕಸೂತಿ ಶಾಲೆಗಳನ್ನು ತೆರೆದು ಹೆಣ್ಣು ಮಕ್ಕಳಿಗೆ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವ ಯೋಜನೆಗಳನ್ನು ಹಾಕಿ ಕೊಂಡಿದ್ದಾಳೆ. ಅಲ್ಲಿನ ಮಕ್ಕಳು ಮತ್ತು ಹೆಂಗಸರಿಗೆ ಶಿಕ್ಷಣ ದೊರಕಿಸಲು ಶಾಲೆ ತೆರೆಯುವ ಯೋಜನೆ ಹಾಕಿಕೊಂಡಿದ್ದಾಳೆ.

ಒಟ್ಟಿನಲ್ಲಿ ಕಾಶ್ಮೀರದ ಈ ಸುಂದರಿಯರು ಭಯ, ಆತಂಕ, ಅವಮಾನದ ನೆರಳಿನಲ್ಲೇ ಹೊಸ ಜೀವನ ಹುಡುಕಬೇಕಾಗಿದೆ.

ಕೃಪೆ : ದಿ ಹಿಂದೂ

ವಿದ್ಯುತ್ ಅದಾಲತ್

ಬಸವಳಿದ ಗ್ರಾಹಕನಿಗೆ ತಂಪೆರೆಯುವ ಹೊಸ ಕಲ್ಪನೆ

ವಿದ್ಯುತ್ ಅದಾಲತ್ : ಹಾಗೆಂದರೇನು ?

ಆಡಳಿತದಲ್ಲಿ ಪಾರದರ್ಶಕತೆ ತೋರುವುದು ಮತ್ತು ಗ್ರಾಹಕನ ಅಹವಾಲಿಗೆ ಪರಿಹಾರ ಒದಗಿಸಿ ಅವನಿಗೆ ಅತ್ಯುತ್ತಮ ಸೇವೆ ಲಭಿಸುವಂತೆ ಮಾಡುವುದು ಸರ್ಕಾರದ ಗುರಿ.

ಅದಕ್ಕಾಗಿ ಒಂದು ಶಾಶ್ವತ ಪರಿಹಾರೋಪಾಯ ರೂಪಿಸಲಾಗಿದೆ. ವಿದ್ಯುತ್ ಕ್ಷೇತ್ರದಲ್ಲೊಂದು ಹೊಸ ಪರಿಕಲ್ಪನೆ ''ಜಿಲ್ಲಾ ವಿದ್ಯುತ್ ಅದಾಲತ್'' ನ ಸ್ಥಾಪನೆ, ಗ್ರಾಹಕರಿಗೆ ಸಲ್ಲಬೇಕಾದ ಸೇವೆ ಕ್ಲುಪ್ತ ಕಾಲದಲ್ಲಿ ಸಿಗುವಂತೆ ಮಾಡುವುದು ಇದರ ಉದ್ದೇಶ.

ವಿದ್ಯುತ್ ಅದಾಲತ್‌ನ ರಚನಾ ಸ್ವರೂಪ ಮತ್ತು ಅದರ ಕಾರ್ಯ ಉದ್ದೇಶ :-

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ವಿದ್ಯುತ್ ಅದಾಲತ್‌ಗಳಿರುತ್ತವೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ವಿದ್ಯುತ್ ಅದಾಲತ್‌ನ ಅಧ್ಯಕ್ಷರು, ಅದಲಾತ್‌ನಲ್ಲಿ ಆಯಾ ಜಿಲ್ಲಾ ಪಂಚಾಯಿತ್ತಿಯ ಆಡಳಿತಾಧಿಕಾರಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಜಿಲ್ಲಾ ಮಟ್ಟದ ಕಾರ್ಯಪಾಲಕ ಅಭಿಯಂತರರು ಹಾಗೂ ಇತರ ಇಂಜಿನಿಯರುಗಳಿರುತ್ತಾರೆ.

ಪ್ರತಿ ತಿಂಗಳ 15ನೇ ತಾರೀಖಿನಂದು ಜಿಲ್ಲಾ ವಿದ್ಯುತ್ ಅದಾಲತ್ ಸಭೆ ಸೇರುತ್ತದೆ. ವಿದ್ಯುತ್ ವಿತರಣೆಗೆ ಸಂಬಂಧಿಸಿದಂತೆ ಗ್ರಾಹಕರು ನೇರವಾಗಿ ಈ ವಿದ್ಯುತ್ ಅದಾಲತ್‌ಗೆ ತಮ್ಮ ಅಹವಾಲು, ದೂರುಗಳನ್ನು ಸಲ್ಲಿಸಬಹುದು.

ಗ್ರಾಹಕರ ದೂರುಗಳ ಕುರಿತು ಅಲ್ಲಿಯೇ ''ವಿದ್ಯುತ್ ಅದಾಲತ್'' ವಿವರವಾಗಿ ಗ್ರಾಹಕರ ಸಮ್ಮುಖದಲ್ಲಿ ಚರ್ಚಿಸಿ ಸಮಸ್ಯೆಗೆ ಪರಿಹಾರ ಸೂಚಿಸುತ್ತದೆ.

ನಿಷ್ಪಕ್ಷಪಾತವಾಗಿ ದೂರುಗಳನ್ನು ಆಲಿಸಿ, ಪರಿಹಾರ ನೀಡುವ ಈ ವಿದ್ಯುತ್ ಅದಾಲತ್‌ಗಳ ಕಾರ್ಯ ನಿರ್ವಹಣೆ ಸಂಪೂರ್ಣ ಪಾರದರ್ಶಕ, ಇವು ನಿರಂತರ ನ್ಯಾಯ ವಿತರಿಸುವ ನ್ಯಾಯಾಲಯಗಳು.

ವಿದ್ಯುತ್ ಅದಾಲತ್‌ಗೆ ದೂರು ಸಲ್ಲಿಸುವ ವಿಧಾನ :

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಎಲ್ಲ ಗ್ರಾಹಕರು ಅಂದರೆ ಎಲ್ಲ ಸಾರ್ವಜನಿಕರೂ ವಿದ್ಯುತ್ ಅದಲಾತ್‌ಗೆ ದೂರು ಸಲ್ಲಿಸಬಹುದು.

ದೂರು ಸಲ್ಲಿಕೆಗೆ ಯಾವುದೇ ಶುಲ್ಕವಿಲ್ಲ, ನಿಗಧಿತ ಫಾರ್ಮುಗಳು, ನಮೂನೆಗಳನ್ನು ತುಂಬಬೇಕಾದ ಜಂಜಾಟವಿಲ್ಲ.

ಒಂದು ಬಿಳಿ ಹಾಳೆಯ ಮೇಲೆ ದೂರುಸಲ್ಲಿಸಿದರೆ ಸಾಕು. ದೂರು ಸಲ್ಲಿಸುವಾಗ.

ಅ. ನಿಮ್ಮ ಗ್ರಾಹಕ ಸಂಖ್ಯೆ (ಕನ್ಸೂಮರ್ ನಂ.)

ಆ. ವಿಳಾಸ. ಟೆಲಿಫೋನ್ ನಂಬರ್ (ಇದ್ದರೆ)

ಇ. ನಿಮಗೆ ಮಂಜೂರಾದ ಹೈಟೆನ್ಷನ್ / ಲೋಟೆನ್ಷನ್ ವಿದ್ಯುತ್ ಪ್ರಮಾಣ,

ಈ. ನೀವು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ಯಾವ ಉಪವಿಭಾಗದ ವ್ಯಾಪ್ತಿಗೆ ಒಳಪಡುವಿರೆಂಬ ವಿವರ,

ಉ. ವಿಭಾಗ:ಜಿಲ್ಲೆ ಮತ್ತು

ಊ. ನಿಮ್ಮ ದೂರಿನ ಸಂಕ್ಷಿಪ್ತ ವಿವರ ಬರೆದರೆ ಸಾಕು,

ನಿಮ್ಮ ದೂರನ್ನು ಜಿಲ್ಲಾಧಿಕಾರಿ ಜಿಲ್ಲಾ ವಿದ್ಯುತ್ ಅದಾಲತ್.......... ಜಿಲ್ಲೆ, ಇವರಿಗೆ ತಲುಪಿಸಬೇಕು. ದೂರುಗಳನ್ನು ಅಂಚೆಯ ಮೂಲಕ ಸಲ್ಲಿಸಬಹುದು. ಇಲ್ಲವೇ ಸ್ವತಃ ನೀಡಬಹುದು. ವಿದ್ಯುತ್ ಅದಾಲತ್‌ನಲ್ಲಿ ಸ್ವೀಕೃತವಾಗುವ ದೂರುಗಳನ್ನು ಕ್ರೋಢೀಕರಿಸಿ. ಅವುಗಳ ವಿವರವಾದ ಅಧ್ಯಯನ ಮಾಡಿ ಜನತೆಯನ್ನು ಕಾಡುವ ನಿರಂತರ ವಿದ್ಯುತ್ ತೊಂದರೆಗಳಿಗೆ ಶಾಶ್ವತ ನಿವಾರೊಪಾಯಗಳನ್ನು ಅರಸುವುದು ಸರ್ಕಾರದ ಆಶಯಗಳಲ್ಲೊಂದು.

- ಕರ್ನಾಟಕ ವಾರ್ತೆ

ಸರಳುಗಳೊಳಗಿನ ಸೃಷ್ಟಿ

- ಶತಭಿಷ



ಸುತ್ತಲೂ ಮೂರಾಳುದ್ದದ ಗೋಡೆಗಳು, ಅದಕ್ಕೊಂದು ಚಿಕ್ಕಬಾಗಿಲು, ಬಾಗಿಲಿಗೊಂದು ಚಿಕ್ಕ ಕಿಂಡಿ, ಹೊರಗೆ ಬಂದು ಬಾಗಿಲು ಬಡಿದವರನ್ನು ಕಿಂಡಿಮೂಲಕ ನೋಡಿ, ಅವರು ಒಳಬರುವ ಪರವಾನಗಿ ಹೊಂದಿದ್ದರೆ ಮಾತ್ರ ಒಳಪ್ರವೇಶ. ಇಂಥ ಉಸಿರುಕಟ್ಟಿಸುವ ವಾತಾವರಣದಲ್ಲಿ ನೂರಾರು ಜೀವಗಳು ತಮ್ಮ ನಿನ್ನೆಗಳನ್ನೂ, ಕನಸುಗಳನ್ನೂ ಗೋಡೆಗಳಿಗೆ ಢಿಕ್ಕಿ ಹೊಡೆಸಿಕೊಳ್ಳುತ್ತಾ ಬದುಕಬೇಕು. ರಾತ್ರಿಗಳನ್ನು ಎಳೆದೆಳೆದು ಕಳೆಯಬೇಕು, ಬೆಳಗನ್ನು ಕುಟ್ಟಿಕುಟ್ಟಿ ಕುಗ್ಗಿಸಬೇಕು. ನಿಟ್ಟುಸಿರನ್ನು ಉಡಬೇಕು ತೊಡಬೇಕು ಹೊದ್ದು ಮಲಗಬೇಕು. ಇದು ಕಾರಾಗೃಹವಾಸಿಗಳ ಬದುಕು.

ಇಂಥ ಬದುಕಿಗೆ ನವಚೈತನ್ಯ ತುಂಬಿದವರು ರಂಗಕರ್ಮಿ ಶ್ರೀ ಹುಲುಗಪ್ಪ ಕಟ್ಟೀಮನಿಯವರು. ಜಡ್ಡು ಕಟ್ಟಿದ, ಸಮಾಜದ ವ್ಯವಸ್ಥೆ ತೋರಿದ ಕ್ರೌರ್ಯದಿಂದಾಗಿ ಅದೇ ಕ್ರೌರ್ಯವನ್ನೇ ಗುಣವಾಗಿಸಿಕೊಂಡವರ ಒಳಗೆ ಹುದುಗಿರಬಹುದಾದ ಪ್ರತಿಭೆ ಗೋಚರಿಸಿದ್ದು ಈ ಕಟ್ಟೀಮನಿಯವರಿಗೆ. ಈ ತರುಣನ ಸಾಹಸ ಅನುಕರಣಯೋಗ್ಯ. ಕಳೆದೆರಡು ವರ್ಷಗಳಿಂದ ಜೈಲಿನ ಪುರುಷ ಖೈದಿಗಳಿಂದ ರಂಗಪ್ರಯೋಗ ಮಾಡಿಸುತ್ತಿದ್ದ ಕಟ್ಟೀಮನಿಯವರು ಈ ಬಾರಿ ಅದನ್ನೂ ಮಹಿಳಾ ಖೈದಿಗಳಿಗೂ ವಿಸ್ತರಿಸಿದ್ದು ಸ್ತುತ್ಯಾರ್ಹ. ಕಟ್ಟೀಮನಿಯವರ ಅರವತ್ತಕ್ಕೂ ಹೆಚ್ಚುದಿನಗಳ ಪರಿಶ್ರಮ ಫಲನೀಡಿದ್ದು ದಿನಾಂಕ 2-9-2002ರ ಸಂಜೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ವೇದಿಕೆಯಲ್ಲಿ 'ಮಾಧವಿ' ನಾಟಕ ರೂಪದಲ್ಲಿ.

ಭೀಷ್ಮ ಸಹಾನಿಯವರ ಹಿಂದಿನಾಟಕ 'ಮಾಧವಿ'ಯನ್ನು ಕನ್ನಡಕ್ಕೆ ಅನುವಾದಿಸಿದವರು ಗೋರೂರು ಶ್ರೀನಿವಾಸಮೂರ್ತಿ. 'ಮಾಧವಿ' ಮಹಾಭಾರತದಲ್ಲಿ ಬರುವ ಒಂದು ಎಳೆಯ ಕಥೆ. ಯಯಾತಿಯ ಮಗಳು ಮಾಧವಿ, ವಿಶ್ವಾಮಿತ್ರನ ಶಿಷ್ಯ ಗಾಲವನಿಗೆ ದಾನವಾಗಿ ಕೊಡಲ್ಪಡುತ್ತಾಳೆ. ಗಾಲವ ತನ್ನ ಗುರುವಿಗೆ ಎಂಟುನೂರು ಅಶ್ವಮೇಧಾರ್ಹ ಕುದುರೆಗಳನ್ನು ಗುರುದಕ್ಷಿಣೆಯಾಗಿ ಒಪ್ಪಿಸಲು, 'ಚಕ್ರವರ್ತಿ'ಗಳನ್ನು ಹಡೆಯುವ ಭಾಗ್ಯವಿರುವ ಮಾಧವಿಯನ್ನು ಹಲವು ರಾಜರುಗಳಲ್ಲಿ ಒತ್ತೆ ಇಟ್ಟು, ತನಗೆ ಬೇಕಾದ ಕುದುರೆಗಳನ್ನು ಪಡೆಯುತ್ತಿರುತ್ತಾನೆ. ಒಬ್ಬನೇ ರಾಜನಲ್ಲಿ ಎಂಟುನೂರು ಕುದುರೆ ಲಭ್ಯವಿಲ್ಲದ ಕಾರಣ ಅವನು ಹಲವು ರಾಜರ ಮೊರೆ ಹೋಗಬೇಕಾಗುತ್ತದೆ. ಪರಿಣಾಮ ಮಾಧವಿ ಹಲವು ರಾಜರಿಗೆ 'ಪುತ್ರ ರತ್ನ'ಗಳನ್ನು ಹಡೆದು ಕೊಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತಮಗರಿವಿಲ್ಲದಂತೆ ಮಾಧವಿಗಾಲವರು ಪರಸ್ಪರ ಆಕರ್ಷಿತರಾಗುತ್ತಾರೆ. ಮಾಧವಿಗೆ ಪ್ರತಿಬಾರಿ ಮಗುವನ್ನು ಪಡೆದಾಗಲೂ ಮಾಡಿ ಮತ್ತೆ ಕನ್ಯೆಯಾಗುವ ವರವಿದೆ. ಗಾಲವನಿಗೆ ಎಷ್ಟೇ ಕಷ್ಟಪಟ್ಟರೂ 600 ಕುದುರೆಗಳನ್ನು ಮಾತ್ರ ಹೊಂದಿಸಲು ಸಾಧ್ಯವಾಗುತ್ತದೆ. ಉಳಿದ 200 ಕುದುರೆಗಳ ಬದಲು ಗಾಲವನ ಮೇಲಿನ ಪ್ರೀತಿಗಾಗಿ ಅವನಿಗೆ ತಿಳಿಸದೆಯೇ ವಿಶ್ವಾಮಿತ್ರನಿಗೇ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ ಮಾಧವಿ. ಎಲ್ಲ ಸಂಕಷ್ಟಗಳೂ ಕಳೆದು ಮಾಧವಿ ಮತ್ತೆ ಗಾಲವನೊಂದಿಗೆ ಬದುಕು ಪ್ರಾರಂಭಿಸಲು ಬಯಸಿದಾಗ ಗಾಲವನ ಪುರುಷಾಹಂಕಾರ ಅಡ್ಡಬರುತ್ತದೆ. ಮಾಧವಿ ಕೊನೆಯ ಬಾರಿ ಮಗುವನ್ನು ಪಡೆದನಂತರ ಕನ್ಯತ್ವ ಅನುಷ್ಠಾನ ಮಾಡಿಕೊಳ್ಳುವುದಿಲ್ಲ. 'ತಾಯಿ ಮಾಧವಿ'

ಗಾಲವನಿಗೆ ಅಪಥ್ಯವಾಗುತ್ತಾಳೆ. ಆವೇಳೆಗೆ ಪುರುಷನ ನೀಚತನ ಮತ್ತು ಸ್ವಾರ್ಥದ ಎಲ್ಲ ಮಗ್ಗುಲುಗಳನ್ನು ಕಂಡ ಮಾಧವಿ ಎಲ್ಲವನ್ನೂ ಎಲ್ಲರನ್ನೂ ನಿರಾಕರಿಸುವುದರೊಂದಿಗೆ ನಾಟಕ ಮುಗಿಯುತ್ತದೆ.

ಈ ನಾಟಕದ ಪ್ರಾರಂಭಕ್ಕೆ ಕಟ್ಟೀಮನಿಯವರು ಮಹಿಳೆಯರ ಜೈಲುಜೀವನದ ಸಣ್ಣ ತುಣುಕೊಂದನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಅದು 'ಮಾಧವಿ'ಯ ಶೋಷಣೆಗಿಂತಲೂ ಹೆಚ್ಚು ರೂಕ್ಷವಾಗಿದೆ. ಅಲ್ಲಿರುವ ಪ್ರತಿಯೊಬ್ಬ ಅಪರಾಧಿನಿಯೂ ಒಂದಲ್ಲ ಒಂದು ರೀತಿಯಲ್ಲಿ 'ಮಾಧವಿ'ಯರೇ ಆಗಿದ್ದಾರೆ. ತನ್ನದೇ ಕಥೆಯನ್ನು ಹಾಡಿಕೊಳ್ಳುವ, ಊಟಕ್ಕಾಗಿ ಬಡಿದಾಡುವ, ಹೊಸಹುಡುಗಿಯ ಕೈಯಲ್ಲಿ ಕಸಗುಡಿಸಿಸಿ ಮತ್ತೆ ಕಸಹಾಕುವ, ಪುರುಷಖೈದಿಗಳ ಅಕ್ಕಿರಾಗಿ ಮೂಟೆಗಳನ್ನು ಶುಚಿಮಾಡಲು ತಂದಾಗ ಈ ಮಹಿಳೆಯರನ್ನು ಬ್ಯಾರಲ್ ಒಳಗೆ ಕಳಿಸುವ, ಪುರುಷ ದರ್ಶನವೇ ಅಲಭ್ಯವಾದ ಬದುಕಲ್ಲಿ ಬಂದ ಪುರುಷರನ್ನೇ ಸರಳುಗಳೊಂದಿಗೆ ಕೈಚಾಚಿ 'ಪರ್‌ದೇಶಿ ಪರ್‌ದೇಶಿ ಜಾನ ನಹೀ' ಎಂದು ಹಾಡುವ, ಎಲ್ಲ ಒತ್ತಡಗಳೂ ಕೆಲವೇ ಕ್ಷಣ ಮುಖ್ಯವಾಹಿನಿಯ ನೋಟಕ್ಕೆ ಸಿಲುಕಿಸಿರುವುದು ಕಟ್ಟೀಮನಿಯವರ ಸೂಕ್ಷ್ಮತೆಗೆ ಸಾಕ್ಷಿ. ಈ ಸಣ್ಣ ತುಣುಕೇ ಸಾವಿರ ಮಾಧವಿಯರ ಕಥೆ ಹೇಳುತ್ತದೆ.

ನಲವತ್ತೆರಡು ಜನ ನಟನಟಿಯರು (ಅವರನ್ನು ಈ ಕ್ಷಣಕ್ಕೆ ಖೈದಿಗಳೆನ್ನುವುದು ಬೇಡ) ಎರಡೂವರೆ ಗಂಟೆಗಳ ಕಾಲ ಗತಿತಪ್ಪದಂತೆ ನಾಟಕ ನಡೆಸಿಕೊಂಡು ಹೋಗುತ್ತಾರೆ ಅಭಿನಯದಲ್ಲಿ, ಸಂಗೀತದಲ್ಲಿ, ನೃತ್ಯದಲ್ಲಿ, ರಂಗಪರಿಕರ ಬಳಸುವಲ್ಲಿ, ಆಗಮನ ನಿರ್ಗಮನಗಳಲ್ಲಿ, ಸಂಭಾಷಣೆಯ ಏರಿಳಿತದಲ್ಲಿ, ಅತ್ಯಂತ ನುರಿತ ರಂಗ ಕರ್ಮಿಗಳಂತೆ ಕಾರ್ಯ ನಿರ್ವಹಿಸಿದ್ದಾರೆಂದರೆ ಅವರ ತದಾತ್ಮ್ಯತೆಗೂ ಕಟ್ಟೀಮನಿ ಮತ್ತು ಅವರ ಇತರ ಸಹಚರರ ಪರಿಶ್ರಮಕ್ಕೂ ತಲೆಬಾಗಲೇ ಬೇಕು. ಮೊದಲ ನೋಟಕ್ಕೇ ಕಟ್ಟೀಮನಿಯವರ ಜಾಣ್ಮೆ ತೋರುವುದು, ಪಾತ್ರಧಾರಿಗಳ ಆಯ್ಕೆಯಲ್ಲಿ. ಮಾಧವಿ ಪಾತ್ರಧಾರಿಣಿ ಅನು, ಗಾಲವ ಪಾತ್ರಧಾರಿ ಎಸ್. ವಿ. ರಮೇಶ್, ವಿಶ್ವಾಮಿತ್ರ ಪಾತ್ರಧಾರಿ ಜಿ. ಎನ್. ನಾಗರಾಜು ಮತ್ತು ಮಾಧವಿಯರ ಪಾತ್ರಧಾರಣೆಯರಾದ ಎಲ್ಲ ಮಹಿಳೆಯರೂ ತಮ್ಮ ಪಾತ್ರಗಳಿಗೆ ಅತ್ಯಂತ ನ್ಯಾಯವನ್ನು ಒದಗಿಸಿದ್ದಾರೆ. ಮಾಧವಿಯಾದ ಅನುರವರ ಧ್ವನಿಯ ಏರಿಳಿತ, ನಿಖರ ಸಂಭಾಷಣೆ, ಮತ್ತು ಮುಖಭಾವ, ಚಲನವಲನ, ಎಲ್ಲವೂ ಇವತ್ತು ಅತ್ಯಂತ ಮುಂಚೂಣಿಯಲ್ಲಿರುವ ಯಾವ ರಂಗನಟಿಗೂ ಇಲ್ಲ ಎಂದರೆ ಅತಿಶಯೋಕ್ತಿಯಲ್ಲ. ಕಣ್ಣಿಗೆ ಹಿತವಾದ ಸರಳತೆಯಲ್ಲೂ ಸೌಂದರ್ಯ ಮೈಗೂಡಿಸಿಕೊಂಡ ಈ ನಾಟಕದ ವಸ್ತ್ರವಿನ್ಯಾಸ ತುಂಬ ಮೆಚ್ಚುಗೆಯ ಅಂಶ.

ಇಷ್ಟೆಲ್ಲ ನಟನೆಯನ್ನು ನಿರ್ದೇಶನವನ್ನೂ ಒಪ್ಪಿಕೊಂಡಂತೆ, ಮೆಚ್ಚಿದಂತೆ ನಾಟಕದ 'ಟೆಕ್ಸ್ಟ್' ಒಪ್ಪುವುದು ಕಷ್ಟವಾಗುತ್ತದೆ. ಇದಕ್ಕೆ ನಟನಟಿಯರಾಗಲೀ, ನಿರ್ದೇಶಕರಾಗಲೀ ಕಾರಣವಲ್ಲವಾದರೂ ಕೆಲವು ದೋಷಗಳು ಈ ಕಾರಣಕ್ಕೇ 'ಇಲ್ಲ' ಎನ್ನಲಾಗುವುದಿಲ್ಲ. ಭೀಷ್ಮಸಹಾನಿಯವರ ಮೂಲದಲ್ಲೇ ಈ ದೋಷಗಳಿವೆಯೋ, ಅಥವಾ ಅನುವಾದದಲ್ಲಿ ತಲೆದೋರಿದ್ದೋ ಗೊತ್ತಿಲ್ಲ. ಯಯಾತಿಯನ್ನೂ ಮತ್ತು ಮಾಧವಿಯ ಬದುಕಿನಲ್ಲಿ ಬರುವ ರಾಜರುಗಳನ್ನೂ ಬಫೂನ್‌ಗಳಂತೆ ಚಿತ್ರಿಸಿರುವುದು, ಕಾಲದ ಗಣನೆಯನ್ನು ತಾರದೇ ಯಯಾತಿ ತನ್ನ ನಂತರ ವಂಶವೃಕ್ಷದಲ್ಲಿ ಹತ್ತು ತಲೆಮಾರಿನ ನಂತರ ಬರುವ ಕರ್ಣ ಮತ್ತು ಪಾಂಡವರನ್ನು ಹರಿಶ್ಚಂದ್ರನನ್ನೂ ಪದೇ ಪದೇ ಉಲ್ಲೇಖಿಸುವುದು ಮತ್ತು ದೃಶ್ಯವಾಗಿ ತೋರಿದ್ದನ್ನೇ ಮತ್ತೆ ಹಾಡಿನಲ್ಲಿ ತರುವ ಪುನರಾವರ್ತನೆಗಳು ಇವನ್ನೆಲ್ಲಾ ನಿರ್ದೇಶಕರು ನಿವಾರಿಸಿಕೊಂಡಿದ್ದರೆ 'ಮಾಧವಿ' ಮನದಾಳದಲ್ಲಿ ಬಹುದಿನ ಉಳಿಯಬಹುದಾಗಿದ್ದಂತಹ ಒಂದು ಗಂಭೀರ ನಾಟಕವಾಗಬಹುದಿತ್ತು.

'ಯದನ್ನಾತ್ ಕುರಿತೇ ಪಾಪಂ ತದನ್ನಾತ್ ಪ್ರತಿಗಾಸ್ಥಯೇ' (ದಿನದಲ್ಲಿ ಹುಟ್ಟಿದ ಪಾಪ ಅದೇ ದಿನದಲ್ಲೇ ಪರಿಹಾರವಾಗಲಿ) ಎಂಬಂತೆ ಅಲ್ಲಿ ಕಾಣಿಸಿದ ದೋಷಗಳನ್ನು ಅಲ್ಲೇ ಮರೆತರೆ, ಹುಲಿಗಪ್ಪ ಕಟ್ಟೀಮನಿಯವರು ಕಡೆದು ನಿಲ್ಲಿಸಿದ 'ಮಾಧವಿ' ಒಂದು ಅಪೂರ್ವ ಪ್ರಯೋಗವೇ. ಕರ್ನಾಟಕ ಕಾರಾಗೃಹ ಇಲಾಖೆ ಈ ನಟನಟಿಯರ ಬೇಡಿಗಳನ್ನು ಸ್ವಲ್ಪಮಟ್ಟಿಗೆ ಸಡಿಲಿಸಿ ಈ ನಾಟಕ ಮತ್ತೆ ಮತ್ತೆ ಕರ್ನಾಟಕದಾದ್ಯಂತ ಪ್ರಯೋಗಗೊಳ್ಳುವಂತೆ ಮಾಡಿ, ಜನಸಾಮಾನ್ಯರಿಗೆ ಈ ಅಸಾಮಾನ್ಯರ ಪ್ರತಿಭೆ ಪ್ರದರ್ಶಿತವಾಗಬೇಕು. ಆಗ ಹುಲಿಗಪ್ಪನವರ ಶ್ರಮ ನಿಜವಾದ ಸಾರ್ಥಕ್ಯ ಪಡೆದು ಕೊಳ್ಳುತ್ತದೆ.

ನಿರ್ದೇಶಕರ ನುಡಿ

1997ರಿಂದ ನನ್ನ ಈ ಹುಚ್ಚುತನವನ್ನು, ಕಿರಿಕಿರಿಯನ್ನು ಸಹಿಸಿಕೊಂಡು ಬಂದಿರುವುದು ನಮ್ಮ ರಾಜ್ಯದ ಕಾರಾಗೃಹ ಇಲಾಖೆಗೆ ನಮೋ ನಮಃ...

ರಂಗಾಯಣ ನಮಗೆ ಕೊಡುವ ಒಂದು ತಿಂಗಳ ರಜೆಯಲ್ಲಿ ಈ ಶಿಬಿರ ನಡೆಸಬೇಕೆಂಬ ಯೋಚನೆಯಂತೆ ಈ ವರ್ಷದ ಮೇ 18ರಂದು ಬೆಂಗಳೂರಿನ ಕೇಂದ್ರಕಾರಾಗೃಹಕ್ಕೆ ಹೋಗಿ, ಅಲ್ಲಿ ಮಹಿಳಾ ಬ್ಯಾರಕ್‌ಗೆ ಹೋಗಲು ಪರವಾನಿಗೆ ಪಡೆದು ಒಳಹೋದೆ. ಕಾರಾಗೃಹದ 4 ಮಹಾಗೋಡೆಗಳ ಮಧ್ಯದಲ್ಲಿ ಮತ್ತೂ 4 ಗೋಡೆಗಳ ಮಧ್ಯದಲ್ಲಿ ಈ ಮಹಿಳೆಯರ ವಾಸ. ಪುರುಷರಿಗಾದರೋ ಹಲವು ಎಕರೆಗಳಷ್ಟು ವಿಸ್ತೀರ್ಣವಾದ ಈ ಕಾರಾಗೃಹದಲ್ಲಿ ಬಡಗತನ, ಬಟ್ಟೆ ಹೊಲಿಗೆ, ಅಕ್ಷರ ಮುದ್ರಣ, ಬಟ್ಟೆ ನೇಯುವುದು ಹಾಗೂ ಮಣ್ಣಿನ ಜೊತೆ ಸಾಭಂದ ಇರುವವರಿಗೆ ತೋಟದಲ್ಲಿ ಕೆಲಸ ಮಾಡಲು ಹೋಗಿ ಬರಲು ಅರ್ಹವ್ಯಕ್ತಿಗಳಿಗೆ ಅವಕಾಶವಿದೆ. ಪ್ರತಿಯೊಂದು ಬ್ಯಾರಕ್‌ನ ಒಳ

ಆವರಣದಲ್ಲಿ ಮಂದಿರ, ಮಝೀದಿ ಹಾಗೂ ಚರ್ಚ್‌ಗಳಿವೆ. ಜೊತೆಗೆ ಆಟದ ಮೈದಾನವೂ ಇದೆ. ಇಷ್ಟೆಲ್ಲಾ ವಿಸ್ತಾರವಾದ ಕಾರಾಗೃಹದ ವಿನ್ಯಾಸದಲ್ಲಿ ನಮ್ಮ ಮಹಿಳೆಯರಿಗೆ ಮಾತ್ರ ಸೀಮಿತ ಜಾಗ. ಒಂದು ಕುಟುಂಬ ವಾಸಿಸುವ ಮನೆಯ ವಿನ್ಯಾಸದಲ್ಲಿ 'ಅಡುಗೆಮನೆಗೆಂದೇ...' (''ಅವಳಿಗಾಗಿಯೇ... ಅವಳಿಗೆಂದೇ.. ಅವಳ ಅವಶ್ಯಕತೆ ಅಲ್ಲಿ ಮಾತ್ರವೆಂದೇ...'' ಎಂದು ಅವಳ ಬಗ್ಗೆ ಇದ್ದ ಹಿಂದಿನ ಕಲ್ಪನೆಯಂತೆ ಗೊತ್ತು ಪಡಿಸುವ ಸೀಮಿತ ಜಾಗದ ಕಲ್ಪನೆಯೇ ಇಲ್ಲೂ ಇದೆ.

ಮೊಟ್ಟಮೊದಲಿಗೆ ಹೋದಾಗ ಅವರೆಲ್ಲರೂ ತಲೆ ಎತ್ತಲಾರರು, ಮಾತಾಡಲಾರರು, 'ನೋಡೀಮ್ಮ ಈ ಬಾರಿ ಮಹಿಳೆಯರಿಗಾಗಿ ಶಿಬಿರವನ್ನು ಹಮ್ಮಿಕೊಳ್ಳುತ್ತಿದ್ದೇನೆ' ಎಂದಾಗ ಒಬ್ಬ ತಾಯಿ ಮಾತ್ರ ತಲೆ ಎತ್ತಿ ನೋಡಿದರು. ಆ ತಲೆ ಎತ್ತಿ ನೋಡಿದ 'ಕ್ರಿಯೆ' ಮಾತ್ರ ಅಂದಿನ ಫಲ. ಅಂದು ನಾನು ನನ್ನ ಮಾತನ್ನು ಮುಂದುವರಿಸಲಾಗದೆ ನಾವು ಮಾಡುತ್ತಿರುವ ಯೋಜನೆ, ಯೋಚನೆ ಇತ್ಯಾದಿ ಬಡ ಬಡಿಸಿ ಹೊರಬಂದಾಗ ಈ ಕೆಲಸದ ಬಗ್ಗೆ ನನ್ನಸ್ಥೈರ್ಯವೆಲ್ಲವೂ ಕೂಗಿ ಹೋಗಿತ್ತು. ಈ ಆರು ವರ್ಷಗಳಿಂದ ಕಾರಾಗೃಹದ ಅಧಿಕಾರಿಗಳು ಹಾಗೂ ಕಾರಾಗೃಹ ವಾಸಿಗಳ ಜೊತೆ ಇದ್ದ ನನ್ನ ರಂಗ ಸಂಬಂಧದ ಹಮ್ಮಿನಿಂದಲೇ ಈ ನಿರ್ಧಾರಕ್ಕೆ ಬಂದಿದ್ದೆ. ಆದರೆ ನನ್ನ ಮೊದಲ ಭೇಟಿಯ ದಿನ ಅವರುಗಳು ಹಿಂಜರಿಯುವ, ಮುದುಡಿಕೊಳ್ಳುವ ರೀತಿಯಿಂದ ನಾನು ಈ ನಿರ್ಧಾರವನ್ನು ಬೇಗ ತೆಗೆದುಕೊಂಡೆ ಎನ್ನಿಸಿತು. ಹಿಂದಿನ ವರ್ಷವನ್ನು ನಾವು ಮಹಿಳಾ ವರ್ಷವೆಂದು ಆಚರಿಸಿದ ಹಿನ್ನೆಲೆಯಲ್ಲೇ ಈ ಶಿಬಿರವನ್ನು ಆಚರಿಸುವುದು ಸೂಕ್ತವೆಂದು, ಸ್ವಲ್ಪ ದಿನಗಳ ನಂತರ ಮತ್ತೆ ಹೋದೆ.

ಅಂದು ವಿವರವಾಗಿ ಎಲ್ಲವನ್ನೂ ತಿಳಿಸಿ ಈ ಬಾರಿಯ ನಾಟಕ ಭೀಷ್ಮ ಸಹಾನಿಯವರ 'ಮಾಧವಿ' ಓದಿದೆ. ನಾಟಕದಲ್ಲಿ ಬರುವ ಘಟನೆಗಳಿಗೆ ಅವರು ಸ್ಪಂದಿಸಿದ ರೀತಿ ಮಾತ್ರ... ಈ 'ಮಾತ್ರ'ದಿಂದಲೇ ತಿಳಿಯಿತು. ಅವರ 'Rich Emotion. ನಮ್ಮ ಶಿಬಿರಕ್ಕೆ ಬೇಕಾಗುವಷ್ಟು ಮಹಿಳೆಯರು ಅಲ್ಲಿ ಇರದಿದ್ದ ಕಾರಣ (ಸಜಾ ಆಗಿರುವವರು ಮಾತ್ರ) ಮೈಸೂರಿನ ಕಾರಾಗೃಹದ ಮಹಿಳೆಯರನ್ನು ಈ ಶಿಬಿರದಲ್ಲಿ ಭಾಗವಹಿಸುವಂತೆ ಮೈಸೂರಿಗೆ ಹೋಗಿ ಅಲ್ಲಿ 10 ಜನ ಮಹಿಳೆಯರ ಒಪ್ಪಿಗೆ ಪಡೆದು, ಅವರೆಲ್ಲ ಬೆಂಗಳೂರಿಗೆ ಹೊರಡುವ ದಿನ ಬಂದಾಗ ಅವರನ್ನು ಕರೆತರಲು ಹೋದೆ. ಹೋದಾಗ ಅಲ್ಲಿ ಉಳಿದವರು 'ನಾಟಕ ಮಾಡೋ ಹೆಣ್ಣು ಮಕ್ಕಳು ಹೊರಡಿ... ನಾಟಕ... ನಾಟಕ...'' ಎನ್ನುವ ಮಾತುಗಳಿಂದ ಅಂದು ಹೊರಟವರು ಮೂವರು ಮಾತ್ರ..

ಪ್ರತಿ ವರ್ಷದಂತೆಯೇ ಯೋಗ, ಚಿತ್ರಕಲೆ, ಕುಂಭಕಲೆ ಇತ್ಯಾದಿ ಸೃಜನಾತ್ಮಕ ಚಟುವಟಿಕೆಯ ಮುಖಾಂತರ ಶಿಬಿರ ಪ್ರಾರಂಭವಾಯಿತು. ಸರಿ ತಾಲೀಮು ಪ್ರಾರಂಭವಾಗಬೇಕು, ಆದರೆ 'ಮಾಧವಿ'ಯಲ್ಲಿ ಬರುವ ಯಯಾತಿ, ಗಾಲವ, ವಿಶ್ವಾಮಿತ್ರ ಇತ್ಯಾದಿ ಪುರುಷ ಪಾತ್ರಗಳಿಗೇನು ಮಾಡುವುದು? ನಮ್ಮ ಹಿಂದಿನ 'ಸೀಸರ್' ತಂಡವನ್ನು ಇದರೊಂದಿಗೆ ಕೂಡಿಸುವುದು, ಎಂದೆನ್ನಿಸಿತು. ಈ ಮಾತು ಬಂದಾಗಂತೂ ಕಾರಾಗೃಹದ ವಾತಾವರಣವೇ ತಲ್ಲಣಿಸಿತು. ನಂತರ ಪ್ರತಿಯೊಂದು ಹಂತದಲ್ಲೂ ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತ ತಾಲೀಮು ಪ್ರಾರಂಭವಾಯಿತು. ಆದರೆ ತಾಲೀಮು ಎರಡು ಕಡೆ. ದೃಶ್ಯ, ದೃಶ್ಯಗಳ ಮಧ್ಯದಲ್ಲಿ ಬರುವ ನಿರೂಪಣೆಯನ್ನು, ಹಾಡುಗಳ ಅಭ್ಯಾಸ ಮಹಿಳಾ ಬ್ಯಾರಕ್‌ನಲ್ಲಿ ನಡೆದರೆ, 'ಮಾಧವಿ'ಯ ಬದಲಿಗೆ ಗಂಡು ಮಾಧವನನ್ನು ನಿಲ್ಲಿಸಿಕೊಂಡು ದೃಶ್ಯಗಳ ಅಭ್ಯಾಸ ಪುರುಷರ ಬ್ಯಾರಕ್‌ನಲ್ಲಿ ನಡೆಯತೊಡಗಿತು. ಪರಿಸ್ಥಿತಿ ಹೀಗೆ ಮುಂದುವರೆದಾಗ ಮಹಿಳಾ ಬ್ಯಾರಕ್‌ನಲ್ಲಿ ಒಂದು ಮಣ್ಣಿನ stage ನಿರ್ಮಾಣವಾಯಿತು. ದಿನಗಳು ಹತ್ತಿರವಾಗುತ್ತಿದ್ದ ಹಾಗೆ ಇಂತಿಂಥ ದೃಶ್ಯದ ಜನರನ್ನು ಮಾತ್ರ ಮಹಿಳಾ ಬ್ಯಾರಕ್‌ಗೆ ಪುರುಷರನ್ನು ಕರೆತಂದು ತಾಲೀಮು ಕಾವಲಿನಲ್ಲಿ ಪ್ರಾರಂಭವಾಯಿತು. ನೀವು ಈ Sidewingನಿಂದ ಬರಬೇಕು... ನೀವಿಲ್ಲಿ ನಿಲ್ಲಬೇಕು. ಹೀಗೆ ವಿವರಣೆ ಮಾಡುತ್ತಿದ್ದಾಗ ಆ ಕ್ಷಣ ಕೆಲವರಿಗೆ ವಿಲಕ್ಷಣ, ವಿಚಿತ್ರ, ಅಸಹನೀಯವೆನ್ನಿಸಿದರೆ, ಭಾರತದ ಕಾರಾಗೃಹಗಳ ಇತಿಹಾಸದಲ್ಲಿ 'ಆಕ್ಷಣ' ಮಹಿಳೆಯರ ಪಾಲಿಗೆ ಹೊಸಗಾಳಿಯಾಗಿ ದಾಖಲಾಗುತ್ತಿತ್ತು.

ಈ ಶಿಬಿರದಲ್ಲಿ ಭಾಗವಹಿಸಿದ ಮಹಿಳೆಯರು ರಂಗ ವ್ಯಾಕರಣ ಅರಿಯದವರು. ಇನ್ನು ಹಿಂದೆಯೇ ಹೇಳಿದಂತೆ ವರ್ಷ ವರ್ಷವೂ ಕಾರಾಗೃಹ ವಾಸಿಗಳನ್ನು ನಿಮ್ಮಗಳ ಮುಂದೆ ಕರೆತರುವ ಉದ್ದೇಶವಿಷ್ಟೆ. ಕಾರಾಗೃಹಗಳಲ್ಲಿ ದಿನಗಳನ್ನು ಇಡಿಯಾಗಿ ಹೇಗೇಗೋ ಕಳೆಯುವ ಬದಲು, ಈ ಶಿಬಿರದ ಉದ್ದಕ್ಕೂ ಎರಚಾಡುವ ಬಣ್ಣಗಳ ಮುಖಾಂತರ, ನಾಟಕಕ್ಕಾಗಿ ಕೆತ್ತುವ ಕಾಷ್ಟ ಶಿಲ್ಪಗಳ ಮುಖಗಳಲ್ಲಿ ನಾನಾ ಭಾವಗಳನ್ನು ಗುರುತಿಸುವ ಮುಖಾಂತರ, ತಾಳ, ಹೆಜ್ಜೆ, ಕುಣಿತ, ಆವೇಶ ಮತ್ತು ಥಳಕು ಬಳುಕುವಿನ ನೃತ್ಯಗಳ ಮುಖಾಂತರ ಶಿಬಿರದ ಉದ್ದಕ್ಕೂ ಮುಂಜಾನೆ ಎಂದರೆ ಮುಂಜಾನೆಯೇ 'ಓಂಕಾರ' ಮಾಡುತ್ತಾ ಮೈ ಬಗ್ಗಿಸಿ ಮಾಡುವ ಯೋಗದ ಮುಖಾಂತರ, ಶರೀರ ಹಾಗೂ ಶಾರೀರ ಅಭ್ಯಾಸದಲ್ಲಿ ನಮ್ಮ ಧ್ವನಿ ಪೆಟ್ಟಿಗೆಗೂ ಹಾರ್ಮೋನಿಯಂ ಪೆಟ್ಟಿಗೆಗೂ ಏನು ವ್ಯತ್ಯಾಸವೇ ಇಲ್ಲವೆಂದು ಅರಿತುಕೊಳ್ಳುವ ಮುಖಾಂತರ ಜೀವನದ ಒಂದು ತೆರನಾದ ಹದವನ್ನು ಕಂಡುಕೊಂಡಿದ್ದಾರೆ. ಈ ಎಲ್ಲವೂ ಅವರ ಯಾಂತ್ರೀಕೃತ ದಿನ ನಿತ್ಯದ ಚಟುವಟಿಕೆಯಲ್ಲಿ ಭಿನ್ನವಾದವು. ಹಾಗಾಗಿ ಅವರಲ್ಲಿ ಮತ್ತೆ ಬದುಕುವ ಆತ್ಮ ವಿಶ್ವಾಸ ಮೂಡಲಿ, ಮೂಲತಃ ಯಾರೂ ಕೆಟ್ಟವರಲ್ಲ, ಸಮಯ, ಸಂದರ್ಭಗಳು, ಮಾನಸಿಕ ಒತ್ತಡಗಳು ಮನುಷ್ಯನನ್ನು ಕೆಳತಳ್ಳುತ್ತವೆ. ತಪ್ಪಿನ ಅರಿವಿನಿಂದ ಮತ್ತೆ ಅವರು ಮುಖ್ಯವಾಹಿನಿಗೆ ಸೇರಲಿ. ಇದು ನಮ್ಮ 'ಸಂಕಲ್ಪ' This is Theatre.

- 'ಮಾಧವಿ' ನಾಟಕದ ಬ್ರೋಷರ್‌ನಿಂದ

ಹೀಗೊಂದು ಹೆಣ್ಣಿನ ಕೊಲೆ


ಚಾಮರಾಜಪೇಟೆಯ ದೋಭಿಘಾಟ್‌ನಲ್ಲಿರುವ ಕಾರ್ಪೋರೇಶನ್ ಹೊಲಿಗೆ ಶಾಲೆಯಲ್ಲಿ ಅಲ್ಲಿನ ಶಿಕ್ಷಕಿ ಕಮಲಾಬಾಳೆಯೊವರೊಂದಿಗೆ ಮಾತನಾಡುತ್ತಾ ಕುಳಿತಿದ್ದೆ. ಮಾತಿನ ಮಧ್ಯೆ ಅಲ್ಲಿನ ಕೆಲವು ವಿದ್ಯಾರ್ಥಿನಿಯರು ನಮ್ಮನ್ನು ತಡೆದು ಹೊರಗೆ ಪೋಲಿಸರು ಬಂದಿದ್ದಾರೆಂದು, ಹೊಲಿಗೆ ಟೀಚರನ್ನು ಕರೆಯುತ್ತಿದ್ದಾರೆಂದು ತಿಳಿಸಿದರು. ನಮ್ಮ ಮಾತು ಕಡಿದುಬಿತ್ತು. ಹಿಂದಿನ ದಿನ ಅಲ್ಲಿ ನಡೆದ ಕೊಲೆಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಕೊಟ್ಟು ಬೇಗ ಬರುವುದಾಗಿ ಹೇಳಿ ಕಮಲಾ ಅಲ್ಲಿಂದ ತೆರಳಿದರು. ಕುತೂಹಲ ತಡೆಯಲಾರದೆ ನಾನು ಹೊರಗೆ ಬಂದು ಅಲ್ಲಿನ ಜನಸಂತೆಯನ್ನು ವೀಕ್ಷಿಸುತ್ತಾ ನಿಂತೆ. ಅಲ್ಲೇ ಕಣ್ಣೆದುರೇ ಕಾಣುವ ಪಕ್ಕದ ರಸ್ತೆಯ ಚಿಕ್ಕ ಮನೆಯ ಮುಂದೆ ಪೋಲಿಸರು ನಿಂತಿದ್ದರು. ಸುತ್ತಮುತ್ತ ಅಸಾಧ್ಯ ಜನಸಂದಣಿ ನೆರೆದಿತ್ತು. ಮನೆಯೊಳಗೆ ಹೋದ ಪೋಲೀಸರು ಸುಮಾರು ಮೂವತ್ತರ ಪ್ರಾಯದ ಗಂಡಸಿಗೆ ಕೈಕೋಳ ತೊಡಿಸಿ ಹೊರಗೆಳೆದುಕೊಂಡು ಬಂದು ಜೀಪಿನಲ್ಲಿ ಕೂಡಿಸಿದರು. ಸುತ್ತ ಮುತ್ತಲ ನೆರೆ ಹೊರೆಯವರ ಹೇಳಿಕೆ, ಸಹಿ ಪಡೆದು ಜೀಪು ಹತ್ತಿದರು. ಅಲ್ಲಿದ್ದ ಜನರಲ್ಲಿ ಕೆಲವರು ಜೀಪಿನವರಿಗೂ ಬಂದು ಒಳಗೆ ಕುಳಿತಿದ್ದ ಖೈದಿಗೆ ಬಾಯಿಗೆ ಬಂದಂತೆ ಉಗಿದು, ಮಂಗಳಾರತಿ ಮಾಡಿ ಹೋದರು. ಜೀಪು ಹೊರಟ ನಂತರ ಹಿಂತಿರುಗಿ ಬಂದ ಆ ಪ್ರಕರಣದ ವಿವರಗಳನ್ನು ನನ್ನೊಡನೆ ಬಿಚ್ಚಿದರು.

ಮೂರು ದಿನಗಳ ಹಿಂದೆ ಆ ಪುಟ್ಟ ಮನೆಯಲ್ಲಿ ಇಪ್ಪತ್ತೈದು ವರ್ಷ ವಯಸ್ಸಿನ ಯುವತಿಯಾದ ಸುಶೀಲಳ ಹತ್ಯೆಯಾಗಿತ್ತು. ಮನೆಯವರು ಅದನ್ನು ಆತ್ಮಹತ್ಯೆಯಂಬಂತೆ ಬಿಂಬಿಸಲು ಪ್ರಯತ್ನಿಸುತ್ತಿದ್ದರು. ಆದರೆ ಅಲ್ಲಿನ ನಿವಾಸಿಗಳಿಂದ ಆ ಮನೆಯವರ ಕಪಟತನ ಹೊರಬಿತ್ತು. ಗಂಡ, ಅತ್ತಿಗೆ, ನಾದಿನಿಯರಿಂದ ವಿಶೇಷ ಕಿರುಕುಳ ಅನುಭವಿಸುತ್ತಿದ್ದ ಸುಶೀಲ ಅಸಹಾಯಕ ಸ್ಥಿತಿ ನೆರೆಹೊರೆಯವರಿಗೆಲ್ಲಾ ತಿಳಿದಿತ್ತು. ಗಲಾಟೆ ವಿಪರೀತವಾಗಿ ಇದೇ ಸೆಪ್ಟೆಂಬರ್ 19ರಂದು ಸುಶೀಲ ಮನೆಯವರ ಕಿರುಕುಳಕ್ಕೆ ಬಲಿಯಾದಳು. ದೇಹದ ಮೇಲೆ ಅಸಾಧ್ಯ ಪೆಟ್ಟುಗಳು ಕಂಡು ಬಂದಿತ್ತೆನ್ನುವ ಕಮಲಾರವರು ಅಭಿಪ್ರಾಯಪಡುವಂತೆ ಸುಶೀಲಾಳನ್ನು ಸಾಯಿಸಿನಂತರ ನೇಣು ಹಾಕಿರಬಹುದೆಂದು ಊಹಿಸಲಾಗಿದೆ. ರಾತ್ರಿಯ ವೇಳೆಯಲ್ಲಿ ದುಷ್ಕೃತ್ಯ ನಡೆಸಿದ ದುರುಳರು ನಂತರ ಯಾರಿಗೂ ಸುದ್ದಿ ಕೊಡದೆ ಮಾರನೆಯ ಬೆಳಗ್ಗೆ ವ್ಯಾನ್ ತರಿಸಿ ಅವಳ ಮೃತದೇಹವನ್ನು ಸಾಗಿಸಬಿಡುವ ಯೋಜನೆ ಹಾಕಿದ್ದರು. ಆದರೆ ಕೆಳವರ್ಗದ ಮನೆಗಳೇ ಹೆಚ್ಚಿರುವ ಈ ಬಡಾವಣೆಯಲ್ಲಿ ಜನರು ತೋರಿದ ಅಸಾಧಾರಣ ಸಾಹಸ ಮತ್ತು ಸಾಮಾಜಿಕ ಕಳಕಳಿ ಯಾರಾದರೂ ಮೆಚ್ಚಬೇಕಾದ್ದೇ. ಅವರೇ ಪೋಲೀಸರಿಗೆ ವಿಷಯ ತಿಳಿಸಿ, ಪೋಲೀಸರು ಬರುವವರೆಗೂ ಹೆಣಸಾಗಿಸಿದಂತೆ ತಾವೇ ಕಾವಲಾಗಿ ನಿಂತರು. ಬೆಳಗ್ಗೆ ಹೊಯ್ಸಳದವರು ಬಂದು ಪರಿಸ್ಥಿತಿಯ ಉಸ್ತುವಾರಿ ಕೈಗೆ ತೆಗೆದುಕೊಂಡು ಮನೆಯಲ್ಲಿದ್ದ ಹುಡುಗಿಯ ಅತ್ತೆ, ಮಾವ, ನಾದಿನಿಯನ್ನು ಬಂಧಿಸಿದರು. ನೇಣಿನಲ್ಲಿ ತೂಗಾಡುತ್ತಿದ್ದ ಶವವನ್ನು ಕೆಳಗಿಳಿಸಿ ಅದನ್ನು ಪರಿಶೀಲಿಸಲು ಮಹಿಳಾ ಪೋಲೀಸರ ನೆರವು ಪಡೆದರು. ಮಹಿಳಾ ಪೋಲೀಸರೊಂದಿಗೆ ಪರೀಕ್ಷೆಗೆ ಕಮಲಾಬಾಳೆ ಕೂಡ ನೆರವಾದರು. ಶವದ ಪೂರ್ಣ ಪರೀಕ್ಷೆ ನಡೆಸಿದ ನಂತರ ತಲೆಯ ಮೇಲಿನ ಪೆಟ್ಟು, ತೊಡೆಯಲ್ಲಿ ಮತ್ತು ಕತ್ತಿನ ಗಾಯಗಳನ್ನು ಗಮನಿಸಲಾಯಿತು. ಇಷ್ಟೆಲ್ಲವನ್ನು ನಡೆಸುವ ಸಂದರ್ಭದಲ್ಲಿ ಸುಶೀಲಳ ಗಂಡ ಆ ಸ್ಥಳದಲ್ಲಿ ಇರದೆ ನಾಪತ್ತೆಯಾಗಿದ್ದವನು ಮೂರು ದಿನಗಳ ನಂತರ ಬಂದದ್ದು ಮತ್ತು ಅವನ ಬಂದ ವಿಷಯ ತಿಳಿದು ಪೋಲೀಸರು ಬಂದು ಅವನನ್ನು ಬಂಧಿಸಿ ಹೋದದ್ದು, ಎಲ್ಲವನ್ನೂ ಕಮಲಾಬಾಳೆವರು ನನಗೆ ವಿವರಿಸಿ ಹೇಳಿದರು.

ಈ ಘಟನೆ ಇಂದು ಅತ್ತೆಯ ಮನೆಯಲ್ಲಿ ಕಿರುಕುಳದಿಂದ ಸಾಯುತ್ತಿರುವ ಎಷ್ಟೋ ಹೆಣ್ಣಿನ ಘಟನೆಯಂತೆ ಕಂಡು ಬಂದರೂ ಇಲ್ಲಿ ಮೆಚ್ಚಬೇಕಾದ ಅಂಶವಿಷ್ಟೇ. ಕುಟುಂಬದ ಸದಸ್ಯರು ಆ ಹೆಣ್ಣು ಮಗಳನ್ನು ಹೊಡೆದು ಸಾಯಿಸಿದಾಗ, ನೆರೆಹೊರೆಯವರ ಆ ದೌರ್ಜನ್ಯವನ್ನು ವಿರೋಧಿಸಿ ರೀತಿ, ಅಪರಾಧಿಗೆ ಶಿಕ್ಷೆ ದೊರಕುವಂತೆ ಮಾಡುವಲ್ಲಿ ಅವರು ವಹಿಸಿದ ಪಾತ್ರ ಅನುಕರಣನೀಯ. ಹಾಗೆಯೇ ಪೋಲೀಸರು ಇಂತಹ ಸಂದರ್ಭಗಳಲ್ಲಿ ಮಹಿಳಾ ಸಂಘಟನೆಯ ಪ್ರತಿನಿಧಿಗಳನ್ನು ಗಂಭೀರವಾಗಿ ಪರಿಗಣಿಸಿ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದು ಕೂಡ ಅಷ್ಟೇ ಮುಖ್ಯ.

- ಎನ್. ಗಾಯತ್ರಿ

ಕೌಟುಂಬಿಕ ಹಿಂಸೆ – ಒಂದು ಚರ್ಚೆ



ಕಳೆದ ಒಂದು ವರ್ಷದಿಂದ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ <u>ನೆರವು</u> ಇದೇ 24-8-2002ರಂದು 'ಕೌಟುಂಬಿಕ ಹಿಂಸೆಯ ಮಸೂದೆ'ಯನ್ನು ಕುರಿತಂತೆ ಜಾಗೃತಿ ಕಾರ್ಯಕ್ರಮವನ್ನು ಶ್ರೀನಗರ ಬಡಾವಣೆಯಲ್ಲಿ ಹಮ್ಮಿಕೊಂಡಿತ್ತು. ಸುಮಾರು ಐವತ್ತಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ವಿವಿಧ ಕೌಟುಂಬಿಕ ಸಮಸ್ಯೆಗಳನ್ನು ಮತ್ತು ಪ್ರಶ್ನೆಗಳನ್ನು ಹೊತ್ತ ಮಹಿಳೆಯರು, ಯುವತಿಯರೂ ಭಾಗವಹಿಸಿದ್ದರು.



ಹತ್ತು ಲಕ್ಷ ಖರ್ಚು ಮಾಡಿ ವಿವಾಹವಾದ ವಿನುತಾಗೆ ಗಂಡನ ಹಿಂಸೆ ತಡೆಯಲಾರದೆ ವಿವಾಹ ಬಂಧನದಿಂದ ಹೊರಬರುವ ಅಪೇಕ್ಷೆ, ವರದಕ್ಷಿಣೆಯ ನೆಪದಲ್ಲಿ ದಿನನಿತ್ಯ ಕಿರುಕುಳ ಅನುಭವಿಸುತ್ತಿರುವ ಚಿಕ್ಕತಾಯಿ, ಗಂಡನ ವಿವಾಹೇತರ ಸಂಬಂಧಗಳಿಂದ ನಲುಗಿಹೋಗುತ್ತಿರುವ ಮಹಿಳೆಯರು, ವ್ಯವಹಾರ ಜ್ಞಾನವಿಲ್ಲದೆ ಆಸ್ತಿ ಕಳೆದುಕೊಳ್ಳಬೇಕಾದ ಮರುಗಮ್ಮ, ಬಹುಪತ್ನಿತ್ವದ ಸಮಸ್ಯೆಗೆ ಸಿಕ್ಕವರು, ವಿಧವೆಯ ಮಾಸಾಶನ ಕೇಳಲು ಹೋದಾಗ ಸರ್ಕಾರಿ ಅಧಿಕಾರಿಗಳಿಂದ ತೊಂದರೆಗೆ ಒಳಗಾದವರು - ಹೀಗೆ ಹತ್ತು, ಹಲವಾರು ಸಮಸ್ಯೆಗಳ ಸುರುಳಿ ಬಿಚ್ಚುತ್ತಲೇ ಹೋಯಿತು. ಈ ಮಹಿಳೆಯರನ್ನು ಸಂಘಟಿಸಿದ್ದ ಸಂಘದ ಉಪಾಧ್ಯಕ್ಷೆ ಶ್ರೀಮತಿ ಕಮಲಾ ಬಾಳೆಯವರು ಅವರಿಗೆಲ್ಲಾ ಸಾಂತ್ವನವನ್ನು ಹೇಳುತ್ತಲೇ ಸಮಸ್ಯೆಯ ಗಂಭೀರ ಸ್ವರೂಪದ ಬಗ್ಗೆ ಎಲ್ಲರ ಗಮನ ಸೆಳೆದರು.

ಮಹಿಳೆಯರ ಸಮಸ್ಯೆಗಳನ್ನು ಗಂಭೀರವಾಗಿ ಆಲಿಸಿದ 'ನೆರವು'ನ ಕಾರ್ಯದರ್ಶಿಯಾಗಿರುವ ನ್ಯಾಯವಾದಿ ಶ್ರೀಮತಿ ಹೇಮಲತಾ ಮಹಿಷಿಯವರು ಈ ಸಮಸ್ಯೆಗಳ ಹಿನ್ನೆಲೆಯಲ್ಲಿ ಇಂದು ಪಾರ್ಲಿಮೆಂಟಿನಲ್ಲಿರುವ ಮಂಡಿಸಲು ಸಿದ್ಧವಾಗಿರುವ 'ಕೌಟುಂಬಿಕ ದೌರ್ಜನ್ಯಗಳ ಕುರಿತ ಮಸೂದೆ'ಯ ಪರಿಚಯ ಮಾಡಿಕೊಡುತ್ತಾ ಅದರ ಲೋಪದೋಷಗಳನ್ನು ಸಭೆಗೆ ಮನವರಿಕೆ ಮಾಡಿಕೊಟ್ಟರು.

ಈ ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಎಸ್.ಜಿ. ಸುಶೀಲಮ್ಮನವರು ವಹಿಸಿದ್ದರು. 'ನೆರವು' ಸಂಸ್ಥೆಯ ಕಾರ್ಯೋದ್ದೇಶಗಳನ್ನು ಸಂಘದ ಸಹಕಾರ್ಯದರ್ಶಿ ಎನ್. ಗಾಯಿತ್ರಿ ಸಭೆಗೆ ವಿವರಿಸಿದರೆ, ಖಜಾಂಚಿ ನೇಮಿಚಂದ್ರ ವಂದನಾರ್ಪಣೆ ಮಾಡಿದರು. ಸಂಘದ ಇತರ ಸದಸ್ಯರಾದ ಹೆಚ್. ಎನ್. ಗೀತಾ, ಅನಸೂಯ ಅಶ್ವಥ್ ಮತ್ತು ಡಾ|| ಜಿ. ರಾಮಕೃಷ್ಣ ಸಭೆಯಲ್ಲಿ ಉಪಸ್ಥಿತರಿದ್ದರು.

★ ★ ★

RNI No. 45577/88

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri

CPMG/KA/BG-8/2002
Book-Post/News Letter